ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃ ಭೂಮಿ
ಕನ್ನಡದಿನ ಪತ್ರಿಕೆ
ರಾಯಚೂರಿನಿಂದ ರಾಜ್ಯದವರೆಗೆ

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L
KANNADA MATHRUBHOOMI
KANNADA DAILY PAPER
mathrubhoomircr@gmail.com
Call : 9886635117

ಸಂಪುಟ : Volume : 03 | ಸಂಚಿಕೆ Issue : 131 | ದಿನಾಂಕ : 19-06-2026 ಶುಕ್ರವಾರ | Date : 19-06-2026 Friday | RNI: Karkan/2023/89199 | Post Reg No.: RCR/L/RNP/98/2025-2027 | ರಾಯಚೂರು Raichur | ಪುಟ : Pages : 04 | ರೂ Rs. 2

## ನವಲಗುಂದ: ಶಾಲೆಯ ಎರಡನೇ ಮಹಡಿಯಿಂದ ಬಿದ್ದು 4ನೇ ತರಗತಿ ವಿದ್ಯಾರ್ಥಿ ಸಾವು

**ಧಾರವಾಡ,ಜೂ.18**-ಶಾಲೆಯ ಎರಡನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ನವಲಗುಂದ ಪಟ್ಟಣದ ಅಣ್ಣಿಗೇರಿ ರಸ್ತೆಯಲ್ಲಿರೋ ವಿದ್ಯಾಜ್ಯೋತಿ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ಆಕಾಶ ನೀಲಣ್ಣವರ್ (10) ಮೃತ ಬಾಲಕ ಎಂಬುದು ತಿಳಿದುಬಂದಿದೆ.

ಬಾಲಕ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದ ಎಂಬುದು ತಿಳಿದುಬಂದಿದೆ.

ಅವಘಡದ ನಂತರ ಬಾಲಕನ ಶವವನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ರವಾನೆ ಮಾಡಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ನವಲಗುಂದ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ವಚನಾನಂದ ಸ್ವಾಮೀಜಿ ವಿರುದ್ಧದ ಪೋಕ್ಸೋ ಪ್ರಕರಣ: ಜೂ. 30ಕ್ಕೆ ಆದೇಶ ಕಾಯ್ದಿರಿಸಿದ ಜಿಲ್ಲಾ ವಿಶೇಷ ಪೋಕ್ಸೋ ಕೋರ್ಟ್

**ದಾವಣಗೆರೆ,ಜೂ.18**-ವಚನಾನಂದ ಸ್ವಾಮೀಜಿಗೆ ಪೋಕ್ಸೋ ಪ್ರಕರಣದಲ್ಲಿ ಮಂಜೂರಾಗಿದ್ದ ಜಾಮೀನು ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಜಿಲ್ಲಾ ವಿಶೇಷ ಪೋಕ್ಸೋ ನ್ಯಾಯಾಲಯ ಜೂನ್ 30ಕ್ಕೆ ಆದೇಶ ಕಾಯ್ದಿರಿಸಿದೆ.

ವಚನಾನಂದ ಸ್ವಾಮೀಜಿ ಪಡೆದಿರುವ ನಿರೀಕ್ಷಣಾ ಜಾಮೀನು ರದ್ದು ಕೋರಿ ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು ಅರ್ಜಿ ಸಲ್ಲಿಕೆ ಮಾಡಿದ್ದರು.

ಜೂನ್ 11 ರಂದು ಜಾಮೀನು ರದ್ದು ಅರ್ಜಿ ವಿಚಾರಣೆ ನಡೆದಿತ್ತು. ಇದೀಗ ಜಿಲ್ಲಾ ವಿಶೇಷ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರು ಮತ್ತೆ 30ಕ್ಕೆ ಆದೇಶ ಕಾಯ್ದಿರಿಸಿ ➘ 4


## ಪವಿತ್ರಾಗೌಡಳಿಗೆ ಜೈಲು ಸಿಬ್ಬಂದಿಯಿಂದಲೇ ರಾಜಾತಿಥ್ಯ; ಆರೋಪ ಮಾಡಿದ್ದ ಮಹಿಳೆ ವಿರುದ್ಧ ಸಿಬ್ಬಂದಿಯಿಂದ ದೂರು: ಎನ್‌ಸಿಆರ್ ದಾಖಲು

**ಬೆಂಗಳೂರು,ಜೂ.18**-ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿತೆ ಪವಿತ್ರಾಗೌಡಳಿಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ರಾಜಾತಿಥ್ಯ ನೀಡಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಅಪರಾಧ ಪ್ರಕರಣವೊಂದರಲ್ಲಿ ಮೂರು ತಿಂಗಳು ಜೈಲಿನಲ್ಲಿದ್ದು, ಜಾಮೀನಿನ ಮೇರೆಗೆ ಹೊರಬಂದಿರುವ ಸಂಧ್ಯಾ ನಾಗರಾಜ್ ಎಂಬುವರು ಈ ಆರೋಪ ಹೊರಿಸಿದ್ದಾರೆ. ಮತ್ತೊಂದೆಡೆ, ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಿರುವುದಾಗಿ ಆಪಾದಿಸಿ ಜೈಲಿನ ಮುಖ್ಯ ವೀಕ್ಷಕಿ ದೇವಮ್ಮ ಎಂಬುವರು ದೂರು ನೀಡಿದ್ದು, ಈ ಸಂಬಂಧ ಸಂಧ್ಯಾ ನಾಗರಾಜ್ ವಿರುದ್ಧ ಪರಪ್ಪನ ➘ 4

### ಶಾಲೆ ನವೀಕರಣಕ್ಕೆ ಲಂಚ

## ಡಿಡಿಪಿಐ ಕಚೇರಿ ಎಫ್‌ಡಿಸಿ ಮಹಬಲೇಶ ಲೋಕಾಯುಕ್ತ ಬಲಗೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ಖಾಸಗಿ ಶಾಲಾ ಮಾನ್ಯತೆ ನವೀಕರಣ ಮಾಡುವುದಕ್ಕೆ ಲಂಚ ಸ್ವೀಕರಿಸುವ ವೇಳೆ ಎಫ್ ಡಿಎಯೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ನಗರದಲ್ಲಿ ನಡೆದಿದೆ.

ನಗರದ ಹೊರವಲಯದ ನೂತನ ಜಿಲ್ಲಾಡಳಿತ ಭವನದಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ(ಡಿಡಿಪಿಐ) ಕಚೇರಿಯಲ್ಲಿ ದಾಳಿ ನಡೆಸಿ, ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತ ಅಧಿಕಾರಿಗಳು ಬಲೆ ಹಾಕಿದ್ದಾರೆ.

ಡಿಡಿಪಿಐ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹಾಬಲೇಶ್ವರ ಅವರು 15 ಸಾವಿರ ➘ 4

## ಮೊಹರಂ ಶಾಂತಿ ಸಭೆ: ಸೂಕ್ಷ್ಮ ಸ್ಥಳಗಳ ಪರಿಶೀಲನೆ ನಡೆಸಿ ಕಮಿಟಿಗಳಿಗೆ ಮಾಹಿತಿ ನೀಡಿ ಮುಂಜಾಗ್ರತಾ ಕ್ರಮವಹಿಸಿ-ಡಿಸಿ ಪೂವಿತಾ ಸೂಚನೆ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ಜಿಲ್ಲೆಯಲ್ಲಿ ಮೊಹರಂ ಹಬ್ಬ ಆಚರಣೆ ಮಾಡುವ ಸ್ಥಳಗಳಿಗೆ ಪೋಲಿಸರು, ಕಂದಾಯ ಇಲಾಖೆ ಸೇರಿ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಮಾಡಬೇಕು, ಕಮಿಟಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್ ಸೂಚನೆ ನೀಡಿದರು.

ನಗರದ ಜಿಲ್ಲಾ ಪೋಲಿಸ್ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪೋಲಿಸ್ ಇಲಾಖೆ ವತಿಯಿಂದ ಮೊಹರಂ ಹಬ್ಬದ ನಿಮಿತ್ತ ಜಿಲ್ಲಾ ಮಟ್ಟದ ಶಾಂತಿ ಪಾಲನಾ ಸಭೆಯನ್ನುದ್ದೇಶಿಸಿ ಮಾತನಾಡಿದರು, ಜಿಲ್ಲೆಯಲ್ಲಿ ಮೊಹರಂ ಹಬ್ಬವು ಶಾಂತಿ ಸುವ್ಯವಸ್ಥೆಯಿಂದ ಆಚರಣೆ ಮಾಡಲು ಸಮಸ್ಯಾತ್ಮಕ ಗ್ರಾಮಗಳಲ್ಲಿ 29 ಕಡೆಗಳಲ್ಲಿ ಮೊಹರಂ ಹಬ್ಬ ಆಚರಣೆ ನಿಷೇಧಿಸಿದೆ ಎಂದರು.

ಹಬ್ಬ ಆಚರಣೆಯಲ್ಲಿ ಸಮಸ್ಯೆಯಾಗಬಾರದು, ಅಲಾಯಿ ಕುಣಿ ಸ್ಥಳದಲ್ಲಿ ಎಚ್ಚರ ವಹಿಸಬೇಕು, ಕುಣಿಯನ್ನು ಎತ್ತರಗೊಳಿಸಬೇಕು, ಕುಡಿಯುವ ನೀರು ಸೇರಿದಂತೆ ಸೂಕ್ತ ರೀತಿಯಲ್ಲಿ ಸೌಲಭ್ಯ ಕೈಗೊಳ್ಳಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅರುಣಾಂಗ್ಷುಗಿರಿ ಮಾತನಾಡಿ, ಜಿಲ್ಲೆಯಲ್ಲಿ 690 ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮೊಹರಂ ಹಬ್ಬ ಆಚರಣೆ ಮಾಡಲಾಗುತ್ತಿದೆ. ಕೆಲವು ತಾಲೂಕುಗಳಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಅಗ್ನಿಕುಂಡ ಹಾರುವುದು ನಡೆಯುತ್ತದೆ, ಈ ವೇಳೆ ಎಚ್ಚರಿಕೆ ವಹಿಸಬೇಕು, ಅವಘಡ ಸಂಭವಿಸಿದಲ್ಲಿ ಅಗ್ನಿಶಾಮಕ ದಳ, ಮತ್ತು ಆರೋಗ್ಯ ಸಿಬ್ಬಂದಿಗಳು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ 2021ರಿಂದ 2025ರವರೆಗೆ ಮೊಹರಂ ಹಬ್ಬ ಅವಘಡದಲ್ಲಿ 4 ಜನರು ಸಾವನಪ್ಪಿದ್ದಾರೆ. ಯಾವುದೇ ರೀತಿಯ ಅವಘಡ ನಡೆಯದಂತೆ ಈ ಭಾರಿ ಸೂಕ್ತ ಭದ್ರತೆ ಒದಗಿಸಬೇಕು, ಮತ್ತು ಕಮಿಟಿಯವರು ಗ್ರಾಮಸ್ಥರು ಸಹಕಾರ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು 29 ಕಡೆಗಳಲ್ಲಿ ಮೊಹರಂ ಹಬ್ಬ ಆಚರಣೆ ಮಾಡದಂತೆ ನಿಷೇಧಿಸಲಾಗಿದೆ, ಆಯಾ ಗ್ರಾಮಗಳಿಗೆ ಪೋಲಿಸರು ತೆರಳಿ ಮಾಹಿತಿ ನೀಡಿದ್ದು ಗ್ರಾಮಸ್ಥರು ➘ 4

### ಬ್ಯಾಂಕರ್‌ಗಳ ಸಭೆ: ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಲು ಜಿ.ಪಂ ಸಿಇಓ ಈಶ್ವರ ಕಾಂದೂ ಸೂಚನೆ

## ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸಹಕಾರ ನೀಡಲು ನಿರ್ದೇಶನ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ಮೂರು ತಿಂಗಳಿಗೊಮ್ಮೆ ಆಗುವ ಜಿಲ್ಲಾ ಮಟ್ಟದ ಬ್ಯಾಂಕರ್‌ಗಳ ಸಭೆಗೆ ಬ್ಯಾಂಕುಗಳ ಹಾಗೂ ಯೋಜನೆಗಳಿಗೆ ಸಂಬಂಧಿಸಿದ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು ಆಗಮಿಸದಿರುವುದು ಸರಿಯಲ್ಲ, ಸಭೆಗೆ ಗೈರಾದ ಅಧಿಕಾರಿಗಳ ಪಟ್ಟಿ ನೀಡಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಪಶು ಸಂಗೋಪನಾ ಇಲಾಖೆ ಹಾಗೂ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸಭೆಗೆ ಗೈರಾಗಿದ್ದಕ್ಕಾಗಿ ನೋಟೀಸ್ ನೀಡಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಈಶ್ವರ ಕಾಂದೂ ಸೂಚನೆ ನೀಡಿದರು.



ಅವರಿಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಬ್ಯಾಂಕರ್‌ಗಳ ಜಿಲ್ಲಾ ಸಮಾಲೋಚನಾ ಹಾಗೂ ಜಿಲ್ಲಾ ಪಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಇತ್ತೀಚೆಗೆ ಜಿಲ್ಲೆಗೆ ಕೇಂದ್ರ ಹಣಕಾಸು ಸಚಿವರು ಆಗಮಿಸಿದ್ದರು. ಜಿಲ್ಲೆಯಲ್ಲಿ ಸರ್ಕಾರದ ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಹಣಕಾಸು ಸೌಲಭ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ದೂರುಗಳಿದ್ದು, ಸಮಸ್ಯೆಗಳ ಬಗ್ಗೆ ಗಮನಿಸಿದ್ದಾರೆ. ಜಿಲ್ಲೆಯಲ್ಲಿ ಕೆಲವು ಬ್ಯಾಂಕ್‌ಗಳು ಸಾರ್ವಜನಿಕರ ದೂರುಗಳಿಗೆ ಸ್ಪಂಧಿಸುತ್ತಿಲ್ಲ ಎಂಬ ಮಾಹಿತಿಯನ್ನೂ ಗಮನಿಸಿದ್ದಾರೆ. ಸಾರ್ವಜನಿಕರಿಗೆ ಸರಿಯಾದ ಸ್ಪಂಧನೆ ನೀಡದ ಬ್ಯಾಂಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಶಿಫಾರಸು ➘ 4

## ಗಿಲ್ಲೆಸೂಗೂರಿನಲ್ಲಿಸರ್ಕಾರ ಭೂಮಿಯಲ್ಲಿ ವಾಸ ಮಾಡುವವರಿಗೆ ತೆರವಿಗೆ ಸೂಚನೆ: ಹೈಕೋರ್ಟ ಆದೇಶದ ಉಲ್ಲಂಘನೆ-ಮಹೇಂದ್ರ ಮಿತ್ರ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ತಾಲೂಕಿನ ಗಿಲ್ಲೆಸೂಗೂರು ಗ್ರಾಮದ ಸರ್ವೆ 75 ರಲ್ಲಿ ಇರುವ 33 ಎಕರೆ 35 ಗುಂಟೆ ಭೂಮಿ ಸರ್ಕಾರಿ ಭೂಮಿಯಾಗಿದ್ದು 150 ಜನರಿಗೆ ಹಕ್ಕು ಪತ್ರ ನೀಡಲಾಗಿದೆ. ಇನ್ನೂ 190 ಜನರು 94 ಸಿ ಅರ್ಜಿ ವಿಚಾರಣೆ ಬಾಕಿಯಿವೆ. ಆದರೆ ಅಂಬಾಜಿರಾವ್ ಮೈದನಕರ್ ಇವರು ಮಹಾದೇವಿ, ಮಲ್ಲೇಶ ನಾಯಕ, ಶಿವಶಂಕರ ಇವರು ಖಾಸಗಿ ವ್ಯಕ್ತಿಗಳಿಂದ ಬಾಡಿಗೆ ಪಡೆಯುತ್ತಿರುವದು ಸುಳ್ಳು ದೂರು ನೀಡಿದ್ದಾರೆ ಎಂದು ಡಾ.ಅಂಬೇಡ್ಕರ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಮಹೇಂದ್ರಕುಮಾರ ಮಿತ್ರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, 1954 ರುಣದ 1982 ವರೆಗೆ ಗಾಯರಾಣ ಎಂದು ಪಹಣಿ ಪತ್ರಿಕೆಗಳಲ್ಲಿದೆ. 1982 ರಿಂದ 1988 ವರೆಗೆ ಕಂದಾಯ ಇಲಾಖೆ ಎಂಆರ್ ನಂ-13 ಪ್ರಕಾರ ಸಿ ಮತ್ತು ಡಿ ಅರಣ್ಯ ಇಲಾಖೆಗೆ ಸೇರಿದ್ದು ಎಂದು ಇದ್ದು ಸರ್ಕಾರಿ ಎಂದು ಪಹಣಿಗಳಲ್ಲಿದೆ. ಕೃಷಿ ಭೂಮಿಯಾಗಿರದೇ ಸರ್ಕಾರ ಎಂ.ಎಸ್.ಶಿವಗಣೇಶ ರೈಸ್‌ಮಿಲ್, ಪರಿಶಿಷ್ಟ ವರ್ಗಗಳ ಆಶ್ರಮ ಶಾಲೆ, ➘ 4

## ಕನ್ನಡ ಸೇನೆಯಿಂದ ಗಡಿನಾಡ ಸಮಸ್ಯೆಗಳ ಜಾಗೃತಿಜಾಥಾ ಕನ್ನಡ ಶಾಲೆ ಉಳಿಸಿ ಭಾಷೆ ಬೆಳೆಸಬೇಕು-ಕೆ.ಎಂ.ಕುಮಾರ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ರಾಜ್ಯದಲ್ಲಿ ಕನ್ನಡಿಗರಿಗೆ ಉದ್ಯೋಗ, ಸರ್ಕಾರಿ ಶಾಲೆಗಳ ಉಳಿಸಿ ಬೆಳೆಸಬೇಕು, ಕನ್ನಡದಲ್ಲಿ ನಾಮ ಫಲಕಗಳು ಕಡ್ಡಾಯವಾಗಿ ಅಳವಡಿಕೆ ಮಾಡಲು ಸರ್ಕಾರ ಕ್ರಮ ವಹಿಸಬೇಕು ಎಂದು ಕನ್ನಡ ಸೇನೆ ಕರ್ನಾಟಕ ರಾಜ್ಯಾಧ್ಯಕ್ಷ ಕೆ.ಎಂ ಕುಮಾರ ಆಗ್ರಹಿಸಿದರು.

ಅವರಿಂದು ನಗರದ ಆರ್‌ಟಿಓ ವೃತ್ತದಲ್ಲಿ ಕನ್ನಡ ಸೇನೆ ಸಂಘಟನೆಯಿಂದ ಆಯೋಜಿಸಲಾಗಿದ್ದ ಗಡಿನಾಡು ಜಾಗೃತಿ ಬೈಕ್ ಜಾಥಾಗೆ ಚಾಲನೆ ನೀಡಿ ಮಾತನಾಡಿದರು,

ರಾಜ್ಯದಲ್ಲಿ ಅನೇಕ ಕಾರ್ಖಾನೆ, ಸೇರಿದಂತೆ ಹಲವು ವಲಯಗಳಲ್ಲಿ ಕನ್ನಡಿಗರಿಗೆ ಉದ್ಯೋಗಕ್ಕೆ ಮೊದಲ ಹೆಚ್ಚಿನ ಆದ್ಯತೆ ನೀಡಬೇಕು, ಸರ್ಕಾರಿ ಮತ್ತು ಖಾಸಗಿ ➘ 4

## ಅಮಾಯಕ ಯುವಕ ಮೇಲೆ ಹಲ್ಲೆ: ತಿಮ್ಮಾರೆಡ್ಡಿ ಗುಡ್ಡಿ ಬೆಂಬಲಿಗರ ಬಂಧನಕ್ಕೆ ಭೀಮಣ್ಣ ಮಂಚಾಲ ಆಗ್ರಹ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ಅಕ್ರಮ ಕೂಟ ರಚಿಸಿಕೊಂಡು ಬಂದು 14 ಜನರ ಗುಂಪೊಂದು ಹಲ್ಲೆ ಮಾಡಿ ಗಂಬೀರ ಗಾಯಗೊಳಿಸಿದ14 ಜನರನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಗುಡ್ಡಿ ತಿಮ್ಮಾರೆಡ್ಡಿ ಸಂಬಂಧಿಗಳೇ ಕೃತ್ಯ ಎಸಗಿದ್ದು ಶಾಂತಿ ಸುವ್ಯವಸ್ಥೆಗಾಗಿ ಕೂಡಲೇ ಬಂಧಿಸಬೇಕೆಂದು ಬಲಗೈ ಜಾತಿಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಭೀಮಣ್ಣ ಮಂಚಾಲ ಮತ್ತು ಕೆ.ಇ.ಕುಮಾರ ಒತ್ತಾಯಿಸಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿದ ಭೀಮಣ್ಣ ಮಂಚಾಲ, ಜೂ.2 ರಂದುಕಟ್ಟಿಗೆ ,ಕ್ರಿಕೆಟ್ ಬ್ಯಾಟ್ ಹಿಡಿದುಕೊಂಡು ಬಂದು ಹಲ್ಲೆ ನಡೆಸಿದ್ದ ಆದರ್ಶ,ಸಂಕೇತ ಸೇರಿದಂತೆ 14 ಜನರು ರಾಘವೇಂದ್ರ ಎಂಬ ಯುವಕನ ಮೇಲೆ ಹಲ್ಲೆ ನಡೆಸಿದ ಕುರಿತು ಮಾರ್ಕೆಟ್ ಯಾರ್ಡ ಠಾಣೆಯಲ್ಲಿ ಕೇಸ್ ದಾಖಲಾಗಿದೆ.ಪ್ರಕರಣಕ್ಕೆ ಸಂಬಂಧಿಸಿಂತೆ ಇಬ್ಬರನ್ನು ಬಂಧಿಸಲಾಗಿದೆ. ಉಳಿದಂತೆ ಆದರ್ಶ, ತರುಣ, ನಾನಿ ಅಲಿಯಾಸ ಮಹಾಲಿಂಗರೆಡ್ಡಿ ಸೇರಿದಂತೆ ಇತರರನ್ನು ಪೊಲೀಸರು ಬಂಧಿಸಿಲ್ಲ. ಇವರೆಲ್ಲರೂ ಗುಡ್ಸಿ ತಿಮ್ಮಾರೆಡ್ಡಿ ಎಂಬಾತ ಸಂಬಂಧಿಗಳಾಗಿದ್ದಾರೆ. ತಿಮ್ಮಾರೆಡ್ಡಿ ➘ 4

## ಪಿಡಬ್ಲ್ಯೂಡಿ ಇಇ ವೆಂಕಟೇಶ ಗಲಗರಿಂದ ನಕಲಿ ವರ್ಕ ಡನ್ ಸರ್ಟಿಫಿಕೇಟ್: ತನಿಖೆಗೆ ಶಿವುಕುಮಾರ ಜಗ್ಲಿ ಒತ್ತಾಯ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ನಕಲಿ ವರ್ಕಡನ್ ಸರ್ಟಿಫಿಕೇಟ್ ನೀಡುವ ದಂಧೆಯಲ್ಲಿ ಭಾಗಿಯಾಗಿರುವ ಲೋಕೊಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ವೆಂಕಟೇಶ ಗಲಗ ಇವರನ್ನು ಸೇವೆಯಿಂದ ವಜಾಗೊಳಿಸಿ ತನಿಖೆ ನಡೆಸಬೇಕೆಂದು ಸಮಾಜಿಕ ಕಾರ್ಯಕರ್ತ ಶಿವುಕುಮಾರ ಜೆಗ್ಲಿ ಒತ್ತಾಯಿಸಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ರಾಷ್ಟ್ರೀಯ ಹೆದ್ದಾರಿ 150 ಎ ವಿಜಯಪುರದಿಂದ ಚಾಮರಾಜನಗರದವರೆಗೆ ರಸ್ತೆ ನಿರ್ಮಾಣ ಕಾಮಗಾರಿಯನ್ನು ಅಮ್ಮಾಪುರು ಆಂಡ್ ಕಂಪನಿಗೆವಹಿಸಲಾಗಿದೆ. ಆದರೆ ಇದೇ ಕಾಮಗಾರಿಯಲ್ಲಿ ಇತರೆ ಕಾಮಗಾರಿ ನಿರ್ವಹಿಸುವದಾಗಿ ಹೇಳಿ ಭೀಮಾಶಂಕರ ದೋರನಹಳ್ಳಿ ಎಂಬುವರಿಗೆ ಕಾರ್ಯಪಾಲಕ ಅಭಿಯಂತರ ವೆಂಕಟೇಶ ಗಲಗ ನಕಲಿ ವರ್ಕಡನ್ ಸರ್ಟಿಫಿಕೇಟ್ ನೀಡಿ ಮಸ್ಕಿ ತಾಲೂಕಿನ ಎರಡು ಕಾಮಗಾರಿಗಳನ್ನು ನೀಡಲಾಗಿದೆ. 3 ಕೋಟಿ 38 ಲಕ್ಷ ರೂಗಳ ನಕಲಿ ವರ್ಕ ಡನ್ ಸರ್ಟಿಫಿಕೇಟ್ ನೀಡಲು ವೆಂಕಟೇಶ ಗಲಗ ಕಾರಣರಾಗಿದ್ದಾರೆ. ಲೋಕೊಫಯೋಗಿ ಸಚಿವ ಸತೀಶ ಜಾರಕಿಹೊಳೆ ಸಂಬಂಧಿ ಎಂದು ಹೇಳಿಕೊಂಡು ಅಕ್ರಮ ವ್ಯವಹಾರದಲ್ಲಿ ವೆಂಕಟೇಶ ಗಲಗ ತೊಡಗಿದ್ದಾರೆ. ಅಕ್ರಮಗಳ ಕುರಿತು ರಾಜ್ಯಪಾಲರು ಹಾಗೂ ➘ 4



## ವಿದ್ಯುತ್ ವಿತರಣಾ ಕೇಂದ್ರಗಳ ಖಾಸಗೀಕರಣಕ್ಕೆ ವಿರೋಧ 22ರಂದು ವಿದ್ಯುತ್ ಗುತ್ತಿಗೆದಾರರಿಂದ ಪ್ರತಿಭಟನೆ-ವೆಂಕಟೇಶ ಚಿಲಕದ




■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಜೂ.18**-ವಿದ್ಯುತ್ ವಿತರಣಾ ಕೇಂದ್ರಗಳನ್ನು ಖಾಸಗೀಕರಣಗೊಳಿಸುತ್ತಿರುವದನ್ನು ವಿರೋಧಿಸಿ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರಿಂದ ಜೂ.22 ರಂದುಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ ಚಿಲಕದ ಹೇಳಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ರಾಜ್ಯದಲ್ಲಿರುವ ಐದು ವಿದ್ಯುತ್ ಸರಬರಾಜ ಕಂಪನಿಗಳನ್ನು ಟಾಟಾ ಪವರ್ ಇವರಿಗೆ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮುಂದಾಗಿರುವದು ಕಳವಳಕಾರಿ. ಸಾರ್ವಜನಿಕರಿಗೆ ಸೇವೆ ನೀಡುತ್ತಿರುವ ಎಸ್ಕಾಂಗಳನ್ನು ಖಾಸಗೀಕರಣಗೊಳಿಸಿದರೆ ಜನರಿಗೆ ಬಡವರು, ರೈತರಿಗೆ ನೀಡುವ ವಿದ್ಯುತ್ ಕಡಿತಗೊಳಿಸಲಾಗುತ್ತದೆ. ನೌಕರರು ಸೇವಾ ಭದ್ರತೆಯನ್ನು ಕಳೆದುಕೊಳ್ಳುತ್ತಾರೆ. ಅಲ್ಲದೇ ಸರಿಸುಮಾರು 50 ಸಾವಿರ ವಿದ್ಯುತ್ ಗುತ್ತಿಗೆದಾರರು ಹಾಗೂ ಅವರನ್ನು ಅವಲಂಬಿಸಿರುವ 3 ಲಕ್ಷ ಜಜನ ಕುಟುಂಬಸ್ಥರು ಬೀದಿಗೆ ಬರುವಂತಾಗುತ್ತದೆ. ➘ 4

# ಪರಿಷತ್ ಕದನ: ಶೇ.100ರಷ್ಟು ಮತದಾನ

## 7ನೇ ಸ್ಥಾನಕ್ಕೆ ಕಾಂಗ್ರೆಸ್-ಜೆಡಿಎಸ್ ಪೈಪೋಟಿ




**ಬೆಂಗಳೂರು,ಜೂ.18-**ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಇಂದು ಚುನಾವಣೆ ನಡೆಯುತ್ತಿದೆ. ವಿಧಾನಸೌಧದಲ್ಲಿ ಬೆಳಗ್ಗೆ 9 ಗಂಟೆಯಿಂದ ಶಾಸಕರು ಮತದಾನ ಮಾಡುತ್ತಿದ್ದು, ಸಂಜೆ 4 ಗಂಟೆವರೆಗೆ ಪ್ರಕ್ರಿಯೆ ನಡೆಯಲಿದೆ. ಮಧ್ಯಾಹ್ನ 2 ಗಂಟೆಯ ವೇಳೆಗೆ ಶೇ.100ರಷ್ಟು ಮತದಾನವಾಗಿದೆ. 222 ಮತಗಳು ಚಲಾವಣೆಯಾಗಿವೆ.

ಕಾಂಗ್ರೆಸ್ 5 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ, ಬಿಜೆಪಿ 2 ಹಾಗೂ ಜೆಡಿಎಸ್ 1 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನ 4 ಹಾಗೂ ಬಿಜೆಪಿಯ 2 ಅಭ್ಯರ್ಥಿಗಳು ನಿರಾಯಾಸವಾಗಿ ಗೆಲುವು ಸಾಧಿಸಲಿದ್ದಾರೆ. ಏಳನೇ ಸ್ಥಾನಕ್ಕೆ ಜಟಾಪಟಿ ಜೋರಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿದೆ. ಸಂಜೆ 4 ಗಂಟೆಯ ಬಳಿಕ ಮತಗಳ ಎಣಿಕೆ ಆರಂಭವಾಗಲಿದೆ. ಸುಮಾರು 6 ಗಂಟೆಯ ವೇಳೆಗೆ ಫಲಿತಾಂಶ ಪ್ರಕಟವಾಗಲಿದೆ.

ಕಾಂಗ್ರೆಸ್ ಅಭ್ಯರ್ಥಿಗಳಾಗಿ ತಿಪ್ಪಣ್ಣಪ್ಪ ಕಮಕನೂರು, ಪಿ.ವಿ.ಮೋಹನ್, ಶಿವಣ್ಣ ಬಿ.ಎಸ್., ಬಿ.ಕೆ.ಹರಿಪ್ರಸಾದ್, ವಿನಯ್ ಕಾರ್ತಿಕ್ ಕಣಕ್ಕಿಳಿದಿದ್ದಾರೆ.

ಪಕ್ಷಗಳ ಶಾಸಕರ ಬಲಾಬಲ: ಅಭ್ಯರ್ಥಿಯ ಗೆಲುವಿಗೆ 28 ಕೋಟಾ ನಿಗದಿಯಾಗಿದೆ. ಕಾಂಗ್ರೆಸ್ ಶಾಸಕರ ಸಂಖ್ಯಾಬಲ 135 ಇದೆ. ಬಿಜೆಪಿ ಸಂಖ್ಯಾಬಲ 62 ಹೊಂದಿದ್ದರೆ, ಜೆಡಿಎಸ್ ಪಕ್ಷ 18 ಶಾಸಕರ ಬಲ ಹೊಂದಿದೆ. ಉಳಿದಂತೆ 3 ಪಕ್ಷೇತರ ಅಭ್ಯರ್ಥಿಗಳು, 3 ಬಿಜೆಪಿ ಉಚ್ಚಾಟಿತ ಶಾಸಕರು ಹಾಗೂ ಸ್ವತಂತ್ರ ಪಕ್ಷದ ಶಾಸಕ ಜನಾರ್ದನ ರೆಡ್ಡಿ ಅವರ ಮತಗಳು ನಿರ್ಣಾಯಕವಾಗಿವೆ. ಮೂವರು ಪಕ್ಷೇತರ ಶಾಸಕರು ಹಾಗೂ ಉಚ್ಚಾಟಿತ ಇಬ್ಬರು ಬಿಜೆಪಿ ಶಾಸಕರು ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವ ಸಾಧ್ಯತೆ ಹೆಚ್ಚಿದ್ದು, ಇತ್ತ ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿಗೆ ಮತ ಹಾಕುವುದಾಗಿ ಘೋಷಿಸಿದ್ದಾರೆ. ಜನಾರ್ದನ ರೆಡ್ಡಿ ಕೂಡ ಬಿಜೆಪಿ ಜೊತೆ ವಿಲೀನವಾಗಿದ್ದು, ಎನ್‌ಡಿಎ ಅಭ್ಯರ್ಥಿಗೆ ಮತ ಹಾಕಲಿದ್ದಾರೆ.

7ನೇ ಸ್ಥಾನಕ್ಕೆ ಮತ ಕಾಳಗ: ಪಕ್ಷಗಳ ಬಲಾಬಲದಂತೆ ಕಾಂಗ್ರೆಸ್ 4 ಸ್ಥಾನಗಳನ್ನು ನಿರಾಯಾಸವಾಗಿ ಗೆಲ್ಲಲಿದೆ. ಇತ್ತ ಬಿಜೆಪಿ ಎರಡೂ ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ. ಇತ್ತ 7ನೇ ಸ್ಥಾನಕ್ಕಾಗಿನ ಸ್ಪರ್ಧೆ ರಂಗೇರಿಸಿದೆ. ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜು ಮಧ್ಯೆ ಮತ ಕಾಳಗ ಏರ್ಪಟ್ಟಿದೆ. ಇಬ್ಬರೂ ಅಭ್ಯರ್ಥಿಗಳಿಗೆ ನಿಗದಿತ ಕೋಟಾ 28 ತಲುಪಲು ಮತಗಳ ಕೊರತೆ ಇದೆ. ಎರಡೂ ಪಕ್ಷಗಳು ಯಾವ ಲೆಕ್ಕಾಚಾರ ಮಾಡಿವೆ ಎಂಬುದು ಕುತೂಹಲ ಕೆರಳಿಸಿದೆ. ಯಾವ ಅಭ್ಯರ್ಥಿಗಳಿಗೆ ಎಷ್ಟು ಮತಗಳನ್ನು ಹಾಕಬೇಕು, ಯಾರಿಗೆ ಎರಡನೇ ಪ್ರಾಶಸ್ತ್ಯದ ಮತಗಳನ್ನು ಹಾಕಬೇಕು ಎಂಬುದನ್ನು ಮೂರು ಪಕ್ಷಗಳು ತಮ್ಮ ಶಾಸಕಾಂಗ ಸಭೆಗಳಲ್ಲಿ ಶಾಸಕರುಗಳಿಗೆ ಈಗಾಗಲೇ ಮಾಹಿತಿ ನೀಡಿದೆ.

ಅಡ್ಡ ಮತದಾನ ಅಥವಾ ಶಾಸಕರ ಗೈರು?: ಮತ ಕೊರತೆ ಎದುರಾಗಿರುವುದರಿಂದ ಅಡ್ಡ ಮತದಾನ ನಡೆಯಲಿದೆಯಾ ಎಂಬ ಕುತೂಹಲ ಕೆರಳಿಸಿದೆ. ಯಾರಾದರೂ ಶಾಸಕರು ಗೈರಾಗುತ್ತಾರೋ ಎಂಬ ನಿರೀಕ್ಷೆಯೂ ಮೂಡಿಸಿದೆ.ಕಾಂಗ್ರೆಸ್ ಶಾಸಕರು ವಂಡರ್ ಲಾ ರೆಸಾರ್ಟ್‌ನಿಂದ ನೇರವಾಗಿ ಬಸ್ ಮೂಲಕ ವಿಧಾನಸೌಧಕ್ಕೆ ಮತದಾನ ಚಲಾಯಿಸಲು ಆಗಮಿಸುತ್ತಿದ್ದು, ಜೆಡಿಎಸ್ ಶಾಸಕರು ದೇವನಹಳ್ಳಿ ರೆಸಾರ್ಟ್‌ನಿಂದ ವಿಧಾನಸೌಧಕ್ಕೆ ಬರುತ್ತಿದ್ದಾರೆ.

## ಎಲ್ಲಾ ಮತದಾನ ಮುಗಿದಿದೆ, ನಾವು ಯಾವ ತಂತ್ರಗಾರಿಕೆ ಮಾಡಿಲ್ಲ: ಸಿಎಂ ಡಿಕೆಶಿ



**ಬೆಂಗಳೂರು,ಜೂ.18-**ಎಲ್ಲ್ ಮತದಾನ ಮುಗಿದಿದೆ. ಯಾವ ತಂತ್ರಗಾರಿಕೆ ಮಾಡಿಲ್ಲ. ತಂತ್ರಗಾರಿಕೆ ಅವಶ್ಯಕತೆ ಇಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪರಿಷತ್ ಚುನಾವಣೆಯಲ್ಲಿ ಮತದಾನ ಮಾಡಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಎಲ್ಲ್ ಮತದಾನ ಮುಗಿದಿದೆ. ನಾವು ಯಾವ ತಂತ್ರಗಾರಿಕೆ ಮಾಡಿಲ್ಲ. ತಂತ್ರಗಾರಿಕೆ ಅವಶ್ಯಕತೆ ಇಲ್ಲ. ಎಲ್ಲರೂ, ಬುದ್ಧಿವಂತರಿದ್ದಾರೆ, ಪ್ರಜ್ಞಾವಂತರಿದ್ದಾರೆ. ಸ್ವಇಚ್ಛೆಯಿಂದ ಶಾಸಕರು ಮತ ಹಾಕಿದ್ದಾರೆ ಎಂದರು.

ಶಾಸಕರ ಜೊತೆ ಎರಡು ದಿನ್ ರೆಸಾರ್ಟ್‌ನಲ್ಲಿ ಕೂತಿದ್ದೆ. ಯಾವ ತಂತ್ರಗಾರಿಕೆಯನ್ನೂ ಮಾಡಿಲ್ಲ. ಅಡ್ಡ ಮತದಾನದ ಬಗ್ಗೆ ಗೊತ್ತಿಲ್ಲ.

ಅಡ್ಡ ಮತದಾನ ಆಗುವ ಅಗತ್ಯ ಇಲ್ಲ. ನಮ್ಮ ಮತ ನಮಗೆ ಹಾಕಿ ಅಂತ್ ಕೇಳಿದ್ದೇವೆ ಅಷ್ಟೇ. ನಮ್ಮ ಶಾಸಕರಿಗೆ ತರಬೇತಿ ನೀಡಲು ರೆಸಾರ್ಟ್‌ಗೆ ಹೋಗಿದ್ದೆವು. ಪ್ರಾಶಸ್ತ್ಯದ ಮತಗಳನ್ನು ಹುಷಾರಾಗಿ ಹಾಕಬೇಕಾಗಿದೆ. ಆ ನಿಟ್ಟಿನಲ್ಲಿ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.ನನಗೆ 224 ಜನ ಆತ್ಮೀಯರಾಗಿದ್ದಾರೆ. ಎಲ್ಲರೂ ನನ್ನ ಬ್ರದರ್ಸ್. ನಾನು ಸಿಎಂ ಆಗಿರುವುದು 224 ಶಾಸಕರಿಗೆ. ಅಡ್ಡಮ ತದಾನ ಬಗ್ಗೆ ನನಗೆ ಗೊತ್ತಿಲ್ಲ. ಕನ್ನಡಿ ಹಾಕಿ ನೋಡಲು ಆಗಲ್ಲ. ಗುಪ್ತ್ ಮತದಾನ ಇದು ಎಂದು ಸಿಎಂ ಹೇಳಿದರು.

ಮೇಕೆದಾಟುನಿಂದ ತಮಿಳುನಾಡು ರೈತರ ರಕ್ಷಣೆ: ಮೇಕೆದಾಟು ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಮೇಕೆದಾಟು ಹಾರ್ಟ್ ಆಫ್ ಡಿ.ಕೆ. ಶಿವಕುಮಾರ್ ಅಲ್ಲ. ಮೇಕೆದಾಟು ಹಾರ್ಟ್ ಆಫ್ ದಕ್ಷಿಣ ಕರ್ನಾಟಕವಾಗಿದೆ. ಈ ಯೋಜನೆಯಿಂದ ತಮಿಳುನಾಡಿಗೆ ಹೆಚ್ಚು ಉಪಯೋಗ ಆಗುತ್ತದೆ. ಇದರಿಂದ ತಮಿಳುನಾಡು ರೈತರಿಗೆ ರಕ್ಷಣೆ ಸಿಗುತ್ತದೆ ಎಂದರು.

ಮೇಕೆದಾಟು ಯೋಜನೆಯ ಒಂದು ಹನಿ ನೀರನ್ನೂ, ನೀರಾವರಿಗೆ ಬಳಸುವುದಿಲ್ಲ. ಅದನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸುತ್ತೇವೆ. ಬೆಂಗಳೂರಿಗೆ ಕುಡಿಯುವ ನೀರಿನ ಅಗತ್ಯ ಇದೆ. ತಮಿಳುನಾಡಿಗೆ ಒಂದು ಅಜೆಂಡಾ ಇದೆ. ಅದರಲ್ಲಿ ನಾನು ಮಧ್ಯಪ್ರವೇಶಿಸುವುದಿಲ್ಲ. ಈ ವಿಚಾರ ಕೋರ್ಟ್‌ನಲ್ಲಿದೆ. 400 ಟಿಎಂಸಿ ಕಾವೇರಿ ನೀರು ಸಮುದ್ರಕ್ಕೆ ಹೋಗಿದೆ. ಅವರು ಅನೇಕ ಅಣೆಕಟ್ಟು ಕಟ್ಟುತ್ತಿದ್ದಾರೆ. ಅದಕ್ಕೆ ನಮ್ಮ ತಕರಾರು ಏನೂ ಇಲ್ಲ. ಅದು ಅವರ ಭೂಮಿ ಕಟ್ಟಲಿ ಎಂದು ತಿಳಿಸಿದರು.

ಮೇಕೆದಾಟು ಯೋಜನೆ ನಮ್ಮ ಕರ್ತವ್ಯವಾಗಿದೆ. ಇಂಧನ ಕ್ಷೇತ್ರಕ್ಕೆ ಈ ಯೋಜನೆಯಿಂದ ರಾಜ್ಯಕ್ಕೆ ನೆರವಾಗಲಿದೆ. ಇದು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರ ಬಳಸುವ ಯೋಜನೆಯಾಗಿದ್. ತ್ಮಿಳುನಾಡಿನವರ ಬಳಿ ಮಾತನಾಡಲು ಸಿದ್ಧ. ನಮಗೆ ಯಾವ ತಕರಾರು ಇಲ್ಲ. ಅನೇಕರು ತಮಿಳುನಾಡಿನಿಂದ ಇಲ್ಲಿಗೆ ಬಂದು, ಕನ್ನಡಿಗರು ಅಲ್ಲಿಗೆ ಹೋಗಿ ವೃತ್ತಿ ಮಾಡುತ್ತಾರೆ. ಕಷ್ಟ ಕಾಲದಲ್ಲಿ ನಾವು ಸುಮಾರು 171 ಟಿಎಂಸಿ ನೀರು ಅವರಿಗೆ ಕೊಡುತ್ತೇವೆ. ಕರ್ನಾಟಕದವರು ಬದುಕಬೇಕು, ತಮಿಳುನಾಡಿನವರೂ ಬದುಕಬೇಕು ಎಂದರು.

ತಮಿಳುನಾಡಿನ ಪರಿಶೀಲನಾ ಅರ್ಜಿಯನ್ನೂ ಸುಪ್ರೀಂ ಕೋರ್ಟ್ ತಿರಸ್ಕಾರ ಮಾಡಿದೆ. ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಸಂಸದರು ರಾಜ್ಯದ ಹಿತಾಸಕ್ತಿ ಕಾಪಾಡುತ್ತಾರೆ. 170 ಟಿಎಂಸಿ ಬಿಡಬೇಕು ಅಂದಾಗ ನಾವು ಒಪ್ಪಿಲ್ಲವಾ?. ಖಂಡಿತವಾಗಿ ಅವರಿಗೆ ಮನವಿ ಮಾಡುತ್ತೇವೆ.

ರಾಜಕಾರಣ ಏನಿಲ್ಲ್ ಇಬ್ಬರಿಗೂ ಒಳ್ಳೆಯದಾಗುವ ಯೋಜನೆ. ತಾಳ್ಮೆಯಿಂದ ಇರಬೇಕು. ಜನರ ಹಿತ ಕಾಪಾಡಿಕೊಂಡು ಹೋಗೋಣ ಎಂದು ಸಿಎಂ ತಿಳಿಸಿದರು.

## ಮಂಡ್ಯ ಪೊಲೀಸರ ಭರ್ಜರಿ ಬೇಟೆ, 111 ಕೆಜಿ ಗಾಂಜಾ ಜಪ್ತಿ

**ಮಂಡ್ಯ,ಜೂ.18-**ಒಡಿಶಾದಿಂದ ಮಂಡ್ಯ ಜಿಲ್ಲೆಯ ಮಾರ್ಗವಾಗಿ ಗಾಂಜಾ ಸಾಗಿಸುತ್ತಿರುವ ಬಗ್ಗೆ ಕೆಸ್ತೂರು ಪೊಲೀಸರಿಗೆ ಬಂದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸುವ ವೇಳೆ ನಾಗಮಂಗಲ ನೋಂದಣಿ ಸಂಖ್ಯೆ ಹೊಂದಿರುವ ಸ್ವಿಫ್ಟ್ ಕಾರನ್ನು ತಡೆದು ತಪಾಸಣೆ ನಡೆಸಿದ್ದಾರೆ. ಈ ವೇಳೆ ಕಾರಿನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ 111 ಕೆಜಿ ಗಾಂಜಾ ಪತ್ತೆಯಾಗಿದೆ. ಕಾರು ಹಾಗೂ ಗಾಂಜಾವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಘಟನಾ ಸ್ಥಳಕ್ಕೆ ಖುದ್ದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಶ್ರೀನಿವಾಸಲು ಎಂಬ ಆರೋಪಿಯನ್ನು ಬಂಧಿಸಿದ್ದಾರೆ. ಈತ ಆಂಧ್ರಪ್ರದೇಶ ಮೂಲದ ವಿರಾಂಜನಪುರದ ನಿವಾಸಿಯಾಗಿದ್ದಾನೆ. ಪ್ರಾಥಮಿಕ ತನಿಖೆಯ ಪ್ರಕಾರ, ಈ ಗಾಂಜಾವನ್ನು ತುಮಕೂರಿನಲ್ಲಿ ಯಾರಿಗೋ ತಲುಪಿಸಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅಲ್ಲಿ ಡೀಲ್ ಕುದುರದೆ ವಾಪಸ್ ಬರುತ್ತಿದ್ದಾಗ ಪೊಲೀಸರ ಬಲೆಗೆ ಬಿದ್ದಿದ್ದಾನೆ. ಈ ಜಾಲದಲ್ಲಿ ಮತ್ತೊಬ್ಬ ವ್ಯಕ್ತಿ ಭಾಗಿಯಾಗಿರುವ ಶಂಕೆ ಇದ್ದು, ಆತ ಯಾರು ಎಂಬ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಕಾರ್ಯಾಚರಣೆಗೆ ಎಸ್‌ಪಿ ಶ್ಲಾಘನೆ: ಮದ್ದೂರು ಡಿವೈಎಸ್ಪಿ ಯಶ್ವಂತ್ ಕುಮಾರ್ ಅವರ ನೇತೃತ್ವದ ವಿಶೇಷ ತಂಡ ಈ ಯಶಸ್ವಿ ಕಾರ್ಯಾಚರಣೆಯನ್ನು ನಡೆಸಿದೆ. ಸಮಯಪ್ರಜ್ಞೆ ಮೆರೆದು ಭಾರಿ ಪ್ರಮಾಣದ ಗಾಂಜಾ ಜಾಲವನ್ನು ಪತ್ತೆಹಚ್ಚಿದ ಕೆಸ್ತೂರು ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ಎಸ್‌ಪಿ ಡಾ. ವಿ. ಜೆ. ಶೋಭಾರಾಣಿ ಅವರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ.

ಪ್ರಸ್ತುತ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾರಿನ ನಿಜವಾದ ಮಾಲೀಕರು ಯಾರು ಮತ್ತು ಈ ಅಂತಾರಾಜ್ಯ ಗಾಂಜಾ ದಂಧೆಯ ಹಿಂದೆ ಯಾರಿದ್ದಾರೆ ಎಂಬ ಬಗ್ಗೆ ತನಿಖೆ ತೀವ್ರಗೊಂಡಿದೆ ಎಂದು ಎಸ್‌ಪಿ ಮಾಹಿತಿ ನೀಡಿದ್ದಾರೆ.

ಬಂಧಿತ ಆರೋಪಿಗಳು ಈ ಹಿಂದೆ ವಿಶಾಖಪಟ್ಟಣಂನಲ್ಲಿ ಎರಡು ಕೇಸ್‌ಗಳಲ್ಲಿ ಭಾಗಿಯಾಗಿದ್ದಾರೆ. ಇನ್ನೊಂದು ಉಪ್ಪಾರ ಪೇಟೆಯಲ್ಲೂ ಒಂದು ಕೇಸ್ ದಾಖಲಾಗಿದೆ. ಆರೋಪಿಗಳೇ ಹೇಳಿರುವ ಹಾಗೆ ತುಮಕೂರಲ್ಲಿ ಅವರು ತಂದಿದ್ದ ಗಾಂಜಾವನ್ನು ಬೇರೆ ಒಬ್ಬ ವ್ಯಕ್ತಿ ರಿಸೀವ್ ಮಾಡಿಕೊಳ್ಳಬೇಕಿತ್ತು. ಆದ್ರೆ ಅವರು ಅದನ್ನು ತೆಗೆದುಕೊಳ್ಳಲು ಬರಲಿಲ್ಲ. ಹಾಗಾಗಿ ಮುಂದೆ ಮಾರುವ ಉದ್ದೇಶದಿಂದ ಕಾರಿನಲ್ಲಿ ತೆರಳುತ್ತಿದ್ದರು. ಈ ವೇಳೆ ಅವರನ್ನು ವಶಕ್ಕೆ ಪಡೆಯಲಾಗಿದೆ. ಇದರಲ್ಲಿ ಇನ್ನೊಬ್ಬ ಇದಾರೆ, ವಿಚಾರಣೆ ವೇಳೆ ಆರೋಪಿಗಳು ಅವರ ಹೆಸರನ್ನು ಬಾಯಿಬಿಟ್ಟಿಲ್ಲ. ವಿಚಾರಣೆ ಮಾಡಿ ತಿಳಿದುಕೊಳ್ಳಲಾಗುವುದು. ವಶಕ್ಕೆ ಪಡೆದಿರುವ ವಾಹನ ಇಲ್ಲೇ ನಾಗಮಂಗಲದವರದ್ದು ಅಂತಾ ಗೊತ್ತಾಗಿದೆ. ಅದರ ಬಗ್ಗೆ ಕೂಡ ತನಿಖೆ ಮಾಡುತ್ತೇವೆ ಎಂದು ಎಸ್ ಪಿ ಮಾಹಿತಿ ನೀಡಿದರು.

ಒಟ್ಟಾರೆ ಜಿಲ್ಲೆಯಲ್ಲಿ ಮುಂದೆ ಭಾರಿ ಅನಾಹುತ ಸೃಷ್ಟಿಸುತ್ತಿದ್ದ ಗಾಂಜಾ ಘಾಟು ಹರಡುವ ಮುನ್ನವೇ ಪೊಲೀಸರು ಕಾರ್ಯಾಚರಣೆ ನಡೆಸಿ ವಶಕ್ಕೆ ಪಡಿಸಿಕೊಂಡಿದ್ದು, ಅವರ ಕರ್ತವ್ಯ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ.

## ನಾನು ಗೌಪ್ಯ ಮತದಾನದ ನಿಯಮ ಉಲ್ಲಂಘಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ : ಬಸನಗೌಡ ಪಾಟೀಲ್ ಯತ್ನಾಳ್

**ಬೆಂಗಳೂರು,ಜೂ.18-**ನಾನು ಗೌಪ್ಯ ಮತದಾನದ ನಿಯಮ್ ಉಲ್ಲಂಘಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. ವಿಧಾನಸೌಧದಲ್ಲಿ ಮಾತನಾಡಿದ ಅವರು, ಗೌಪ್ಯ ಮತದಾನ ಉಲ್ಲಂಘಿಸಿರುವ ವಿರುದ್ಧ ಕಾಂಗ್ರೆಸ್ ದೂರು ಹಿನ್ನೆಲೆ ಪ್ರತಿಕ್ರಿಯಿಸುತ್ತಾ, ನಾನು ನಿಯಮ ಉಲ್ಲಂಘಿಸಿಲ್ಲ. ಗೌಪ್ಯ ಮತದಾನದ ನಿಯಮ ಉಲ್ಲಂಘಿಸಿಲ್ಲ. ಮತದಾನದ ಕೊಠಡಿ ಒಳಗೆ ನಾನು ಯಾರಿಗೆ ಮತ ಹಾಕಿದ್ದೇನೆ ಅನ್ನೋದು ಗೌಪ್ಯವಾಗಿದೆ. ಮತ ಹಾಕಿ ಅಲ್ಲೇ ತೋರಿಸಿದರೆ ಆಗ ಇನ್ ವ್ಯಾಲಿಡ್ ಆಗುತ್ತಿತ್ತು ಎಂದು ಸಮಜಾಯಿಶಿ ನೀಡಿದರು.

ನಾನು ಯಾರಿಗೂ ತೋರಿಸಿಲ್ಲ-ಯತ್ನಾಳ್ ಸ್ಪಷ್ಟನೆ: ನಾನು ಗೌಪ್ಯವಾಗಿಯೇ ಮತ ಹಾಕಿದ್ದೇನೆ. ಯಾರಿಗೂ ತೋರಿಸಿಲ್ಲ, ಹೀಗಾಗಿ ನಾನು ಹಾಕಿರೋದು ವ್ಯಾಲಿಡ್ ವೋಟೇ. ನಾನು ನಿತಿನ್ ನಬಿನ್ ಅವರಿಗೆ ಪತ್ರ ಬರೆದಿದ್ದು ಹೌದು. ನನಗೆ ಲಿಂಗರಾಜ




ಪಾಟೀಲ್ ಹೆಸರು ಆಯ್ಕೆ ಮಾತ್ರ, ಅದನ್ನೇ ಪತ್ರದಲ್ಲಿ ಹೇಳಿದ್ದೇನೆ. ಆದರೆ ಮತದಾನದ ಕೊಠಡಿಯಲ್ಲಿ ಯಾರಿಗೆ ಓಟು ಹಾಕಿದ್ದೇನೋ ಅದನ್ನು ನು ತೋರಿಸಿಲ್ಲ, ಗೌಪ್ಯತೆ ಕಾಪಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನಾನು ಆತ್ಮ ಸಾಕ್ಷಿಯಾಗಿ ಯಾರಿಗೆ ಮತ ಹಾಕಬೇಕೋ ಅವರಿಗೆ ಹಾಕಿದ್ದೇನೆ: ನಾನು ಬಿಜೆಪಿ ಚಿಹ್ನೆಯಡಿ ಗೆದ್ದು ಶಾಸಕನಾಗಿದ್ದೆ. ನಾನು ಆತ್ಮಸಾಕ್ಷಿಯಾಗಿ ಯಾರಿಗೆ ಮತ ಹಾಕಬೇಕೋ ಹಾಕಿದ್ದೇನೆ. ಪಕ್ಷ ಸೂಚನೆ ಕೊಟ್ಟ ಅಭ್ಯರ್ಥಿಗೆ ಮತ್ಹಾಕಿದ್ದೇನೆ. ಅಶ್ವತ್ ನಾರಾಯಣ್ ಕಾಲ್ ಮಾಡಿದ್ರು. 49 ಶಾಸಕರು ಮನವಿ ಮಾಡಿದ್ರು. ಬಿಜೆಪಿ ಪಕ್ಷ ಸೂಚನೆ ಕೊಟ್ಟಿದ್ದಕ್ಕೆ ಮತ ಹಾಕಿ ಎಂದು ಮನವಿ ಮಾಡಿದ್ರು. ಪಕ್ಷದ ಚಿಹ್ನೆಯಡಿಯಲ್ಲಿ ಗೆದ್ದು ಬಂದಿದ್ದೇನೆ ಎಂದರು. ಚುನಾವಣಾಧಿಕಾರಿಗೆ ವಿ.ಎಸ್.ಉಗ್ರಪ್ಪ ದೂರು: ಗೌಪ್ಯತೆ ನಿಯಮ್ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಿ ಚುನಾವಣಾಧಿಕಾರಿಗೆ ದೂರು ನೀಡಿದ ಬಳಿಕ ಮಾತನಾಡಿದ ಕಾಂಗ್ರೆಸ್ ಹಿರಿಯ ನಾಯಕ ವಿ.ಎಸ್. ಉಗ್ರಪ್ಪ, ಲಿಂಗರಾಜ್ ಪಾಟೀಲ್‌ಗೆ ಮತದಾನ ಮಾಡುತ್ತೇನೆಂದು ಯತ್ನಾಳ್ ಅಧಿಕೃತವಾಗಿ ಪತ್ರ ಬರೆದು ಹೇಳಿದ್ದಾರೆ. ಬಿಜೆಪಿಯವರು ಕಳ್ಳರು ಎಂದು ಎಲ್ಲರ ಮುಂದೆ ಯತ್ನಾಳ್ ಹೇಳಿದ್ದಾರೆ. ಮತದಾನದ ಮಾಹಿತಿ ಬಹಿರಂಗಪಡಿಸಿದರೆ ಅಕ್ರಮ ಆಗಲಿದೆ ಎಂದು ತಿಳಿಸಿದರು. ಚುನಾವಣಾಧಿಕಾರಿ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತಗಳನ್ನು ಅಸಿಂಧುಗೊಳಿಸಬೇಕೆಂದು ದೂರು ನೀಡಿದ್ದೇವೆ. ಮತದಾನ ರಹಸ್ಯವಾಗಿದ್ದು ಅದನ್ನು ಬಹಿರಂಗಪಡಿಸಿದ್ದರೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಿ ಎಂದು ತಿಳಿಸಿದರು.

## ಅಡ್ಡ ಮತದಾನ ಸಾಬೀತು ಮಾಡಲಿ, ನಾನು ಆತ್ಮಸಾಕ್ಷಿಯಿಂದ ಮತ ಹಾಕಿದ್ದೇನೆ-ಶಾಸಕ ಜಿಟಿಡಿ

**ಬೆಂಗಳೂರು,ಜೂ.18-**ಯಾರು ಅಡ್ಡ ಮತದಾನ ಮಾ ಡಿದ್ದಾರೆ ಅಂತಿದ್ದಾರೋ ಅವರು ಸಾಬೀತು ಮಾ ಡಲಿ. ನಾನು ಆತ್ಮಸಾಕ್ಷಿಯಾಗಿ ಮತ ಹಾಕಿದ್ದೇನೆ ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಹೇಳಿ ದ್ದಾರೆ. ಜಿ.ಟಿ. ದೇವೇಗೌಡ ಅವರು ಅಡ್ಡ ಮತದಾನ ಹಾಕಿದ್ದಾರೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸುತ್ತಾ, ಆತ್ಮಸಾಕ್ಷಿಯ ಮತ ಹಾಕಿದ್ದೇನೆ.



ನನಗೆ ಆರೋಗ್ಯ ಸರಿ ಇರಲಿಲ್ಲ. ಬೆಳಗ್ಗೆಯೇ ಔಷಧಿ ತೆಗೆದುಕೊಂಡಿದ್ದೇನೆ. ಹೀಗಾಗಿ ಬೇಗ ಹೋಗಿ ಮತ ಹಾಕಿ ಬಂದೆ. ನಮ್ಮ ಪಕ್ಷದ ಅಭ್ಯರ್ಥಿ ಗೆಲ್ತಾರೆ ಎಂದರು. ಬೆಳಗ್ಗೆಯಿಂದ ಹೆಚ್.ಡಿ.ಕುಮಾರಸ್ವಾಮಿ ಸಂಪರ್ಕದಲ್ಲಿ ಇಲ್ಲ.

ನನ್ನನ್ನೂ ಯಾರೂ ಸಂಪರ್ಕ ಮಾಡಿಲ್ಲ. ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದು ಕುಮಾರಸ್ವಾಮಿಗೆ ಗೊತ್ತು. ಅವರು ಅದನ್ನು ಮಾಡುತ್ತಾರೆ ಎಂದು ತಿಳಿಸಿದರು. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಮಾತನಾಡಿ, ಜೆಡಿಎಸ್ ಪಕ್ಷದ 18 ಮಂದಿ ಶಾಸಕರು ಮತ ಹಾಕಿದ್ದಾರೆ. ನಮ್ಮ ಅಭ್ಯರ್ಥಿ ಗೋವಿಂದರಾಜು ಗೆಲ್ಲುತ್ತಾರೆ. ಅಗತ್ಯ ಮತಗಳು, ಪ್ರಾಶಸ್ತ್ಯ ಮತಗಳಲ್ಲಿ ಗೆಲ್ಲಬಹುದು ಎಂಬ ನಿರೀಕ್ಷೆ ಇದೆ. ಜಿ.ಟಿ.ದೇವೇಗೌಡ ಹಾಗೂ ಹನ್ನೂರು ಮಂಜುನಾಥ್ ರೆಸಾರ್ಟ್‌ಗೆ ಬಂದಿಲ್ಲ. ಅವರು ನೇರವಾಗಿ ಬಂದು ಮತ ಹಾಕಿದ್ದಾರೆ. ಆತ್ಮಸಾಕ್ಷಿಯಾಗಿ ಮತ ಹಾಕಿದ್ದಾರೆಂದು ಭಾವಿಸುತ್ತೇನೆ ಎಂದರು.

ಜೆಡಿಎಸ್ ಶಾಸಕ ಹರೀಶ್ ಗೌಡ, ಎನ್‌ಡಿಎ ಅಭ್ಯರ್ಥಿಗೆ ಮತ ಹಾಕಿರುವ ಜಿ.ಟಿ.ದೇವೇಗೌಡರ ಸುದ್ದಿ ಬಗ್ಗೆ ನಾನು ಮಾಧ್ಯಮದಲ್ಲಿ ನೋಡಿದೆ. ಅವರ ಬಗ್ಗೆ ಅನುಮಾನ ವ್ಯಕ್ತಪಡಿಸೋದು ಏನಿಲ್ಲ ಎಂಬುದು ನನ್ನ ಭಾವನೆ.

ಜಿ.ಟಿ.ದೇವೇಗೌಡರ ಜೊತೆ ನಮ್ಮೆಲ್ಲ ವರಿಷ್ಠರು ಚರ್ಚೆ ಮಾಡಿದ್ದಾರೆ. ಅವರೇ ಹೇಳಿಕೆ ಕೊಟ್ಟ ಮೇಲೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು 18 ಶಾಸಕರು ನಮ್ಮ ಪಕ್ಷದ ಅಭ್ಯರ್ಥಿಗೆ ಮತ ಹಾಕಿದ್ದೇವೆ ಎಂದು ಹೇಳಿದ್ದಾರೆ.

## ಉದ್ಧವ್ ಠಾಕ್ರೆಗೆ ಭಾರೀ ಹಿನ್ನಡೆ : ಪಕ್ಷದ ಸಂಸದೀಯ ಸಭೆಗೆ 6 ಸಂಸದರು ಗೈರು-ಶಿಂಧೆ ಬಣ ಸೇರುವ ಸಾಧ್ಯತೆ

**ನವದೆಹಲಿ,ಜೂ.18-**ಮಹಾರಾಷ್ಟ್ರ ರಾಜಕೀಯ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ಗುರುವಾರ ಶಿವಸೇನೆ(ಯುಬಿಟಿ)ಯ ಒಂಬತ್ತು ಸಂಸದರಲ್ಲಿ ಆರು ಸಂಸದರು ಸಂಸದೀಯ ಪಕ್ಷದ ಸಭೆಗೆ ಗೈರು ಆಗಿದ್ದು, ಏಕನಾಥ್ ಶಿಂಧೆ ನೇತೃತ್ವದ ಆಡಳಿತಾರೂಢ ಶಿವಸೇನೆ ಸೇರ್ಪಡೆಯಾಗುವ ಸಾಧ್ಯತೆ ಹೆಚ್ಚಾಗಿದೆ.



ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಜೊತೆಗೆ ಸಂಸದರಾದ ಅರವಿಂದ್ ಸಾವಂತ್, ಅನಿಲ್ ದೇಸಾಯಿ ಮತ್ತು ರಾಜಭಾವು ವಾಜೆ ಮಾತ್ರ ಈ ಸಭೆಯಲ್ಲಿ ಭಾಗವಹಿಸಿದ್ದರು. ಉಳಿದ ಆರು ಸಂಸದರಾದ ನಾಗೇಶ್ ಆಶ್ತಿರ್ಕ, ಸಂಜಯ್ ದೇಶಮುಖ್, ಸಂಜಯ್ ಜಾಧವ್, ಸಂಜಯ್ ದಿನಾ ಪಾಟೀಲ್, ಓಂಪ್ರಕಾಶ್ ರಾಜೇನಿಂಬಾಳ್ಕರ್ ಮತ್ತು ಭೌಸಾಹೇಬ್ ವಾಕ್ಚೌರೆ ಅವರು ಸಭೆಗೆ ಗೈರು ಆಗಿದ್ದಾರೆ.

ಗೈರಾದ ಆರು ಸಂಸದರು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಸೇರುವ ಸಾಧ್ಯತೆಗಳಿವೆ ಎನ್ನಲಾಗಿದೆ. ಇದರ ನಡುವೆ ಸಭೆಗೆ ಗೈರಾದ ಸಂಸದರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಉದ್ಧವ್ ಸೇನಾ ನಾಯಕತ್ವ ಚರ್ಚೆ ನಡೆಸುತ್ತಿದೆ ಎನ್ನಲಾಗಿದೆ.

ಈ ಆರು ಸಂಸದರು ಶಿಂಧೆ ನೇತೃತ್ವದ ಶಿವಸೇನೆಯೊಂದಿಗೆ ವಿಲೀನಗೊಳ್ಳಲು ಕೋರುವ ಪತ್ರಕ್ಕೆ ಸಹಿ ಹಾಕಿದ್ದಾರೆ ಮತ್ತು ಅದನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆದಾಗ್ಯೂ, ಈ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಸ್ಪೀಕರ್ ಕಚೇರಿ ಕೆಲವು ಸಂಸದರಿಂದ ವೈಯಕ್ತಿಕ ಪರಿಶೀಲನೆಯನ್ನು ಕೋರಿದೆ ಎಂದು ತಿಳಿದುಬಂದಿದೆ. ಸಹಿಗಳ ಪರಿಶೀಲನೆ ಪ್ರಸ್ತುತ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ಬುಧವಾರ, ಶಿವಸೇನೆ(ಯುಬಿಟಿ) ತನ್ನ ಎಲ್ಲಾ ಲೋಕಸಭಾ ಸಂಸದರು ಗುರುವಾರದ ಸಭೆಯಲ್ಲಿ ಭಾಗವಹಿಸಬೇಕೆಂದು ನಿರ್ದೇಶಿಸುವ ಮೂರು ಸಾಲಿನ ವಿಪ್ ಅನ್ನು ಹೊರಡಿಸಿತ್ತು. ಇದು ಭಿನ್ನಮತೀಯರ ವಿರುದ್ಧ ಸಂಭವನೀಯ ಕ್ರಮಕ್ಕೆ ಅಡಿಪಾಯ ಹಾಕುವ ಕ್ರಮವಾಗಿದೆ.ಪಕ್ಷದ ಮುಖ್ಯಸ್ಥ(ಉದ್ಧವ್ ಠಾಕ್ರೆ)ರನ್ನು ಸಂಪರ್ಕಿಸಿದ ನಂತರ ವಿಪ್ ಅನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಸಾವಂತ್ ಸಭೆಗೆ ಮುಂಚಿತವಾಗಿ ಸುದ್ದಿಗಾರರಿಗೆ ತಿಳಿಸಿದರು.

ಇನ್ನು ಸಭೆಗೂ ಮುನ್ನ ಮಾತನಾಡಿದ ಸಂಜಯ್ ರಾವತ್, ಯಾರು ಬರುತ್ತಾರೋ ಅವರು ನಮ್ಮವರು, ಯಾರು ಬರುವುದಿಲ್ಲವೋ ಅವರು ದ್ರೋಹಿಗಳು ಎಂದು ಕಿಡಿಕಾರಿದರು. ಈ ಬೆಳವಣಿಗೆ ಉದ್ಧವ್ ಠಾಕ್ರೆ ಅವರಿಗೆ ಮತ್ತೊಂದು ರಾಜಕೀಯ ಸವಾಲಾಗಿ ಪರಿಣಮಿಸಿದೆ.

## ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಒತ್ತಾಯಿಸಿ ಅಣಕು ಶವಯಾತ್ರೆ

**ಮೈಸೂರು,ಜೂ.18-**ನೀಟ್ - ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ವಿದ್ಯಾರ್ಥಿಗಳ ಸಾವಿಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕಾರಣರಾಗಿದ್ದಾರೆ ಎಂದು ಆರೋಪಿಸಿ, ಅಣಕು ಶವಯಾತ್ರೆಯ ಮೂಲಕ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಪದಾಧಿಕಾರಿಗಳು ಗುರುವಾರ, ರಾಮಸ್ವಾಮಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.




ದೇಶಾದ್ಯಂತ ನೀಟ್ ಹಗರಣದಿಂದ ಬೇಸತ್ತು ಕೆಲ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದು, ಕೇಂದ್ರ ಸರಕಾರವು ವಿದ್ಯಾರ್ಥಿ ವಿರೋಧಿ ನೀತಿ ಅನುಸರಿಸುತ್ತಿದೆ. ನೀಟ್ ಹಗರಣವನ್ನು ನಿರ್ಲಕ್ಷ್ಯ ಮಾಡಿ ಹಲವಾರು ವಿದ್ಯಾರ್ಥಿಗಳ ಸಾವಿಗೆ ಕಾರಣರಾಗಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಅಣಕು ಶವಯಾತ್ರೆಯ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, 22 ಲಕ್ಷ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳನ್ನು ನಂಬಿರುವ ಪೋಷಕರ ಕುಟುಂಬದ ಬದುಕಿನ ಭವಿಷ್ಯದ ಜೊತೆ ಕೇಂದ್ರ ಸರಕಾರ ಚೆಲ್ಲಾಟವಾಡುತ್ತಿದೆ. ನೀಟ್ ಪರೀಕ್ಷೆಯ ಮರು ಪರೀಕ್ಷೆಯ ಬೇಸರದಿಂದ ಕೆಲವು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು.

ವಿದ್ಯಾರ್ಥಿಗಳ ಮಾನಸಿಕ ಮತ್ತು ಬೌದ್ಧಿಕ ಮಟ್ಟಕ್ಕೆ ಪೆಟ್ಟು ನೀಡುವಂತಹ ಕೆಟ್ಟ ಕೆಲಸ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದಲ್ಲಿ ನಿರಂತರವಾಗಿ ನಡೆದಿದೆ. ಇಡೀ ದೇಶ ವ್ಯಾಪ್ತಿಯಲ್ಲಿ ನೀಟ್ ಮತ್ತು ಇನ್ನಿತರ ಪ್ರವೇಶ ಪರೀಕ್ಷೆಗಳಿಗೋಸ್ಕರ ಪೋಷಕರು, ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಾರೆ. ಮಕ್ಕಳ ಪರಿಶ್ರಮ ಮತ್ತು ಪೋಷಕರ ಹಣವನ್ನು ವ್ಯರ್ಥ ಮಾಡುತ್ತಿರುವ ಕೇಂದ್ರ ಸರಕಾರದ ಧೋರಣೆ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ದೇಶದಲ್ಲಿ ಒಂದು ಪರೀಕ್ಷೆ ನಡೆಸಲು ಸೈನ್ಯವನ್ನು ನಿಯೋಜನೆ ಮಾಡುವಂತಹ ಅಭದ್ರತೆಯ ಕೇಂದ್ರ ಸರಕಾರ ನಮ್ಮ ದೇಶದಲ್ಲಿದೆ ಎಂದು ಹೇಳಲು ನಾಚಿಕೆ ಪಡುವಂತಾಗಿದೆ. ವಿಶ್ವಗುರು ಎಂದು ಬೆನ್ನು ತಟ್ಟಿಕೊಳ್ಳುವ ಮೋದಿ ಅವರು ದೇಶದ ಮಕ್ಕಳಿಗೆ ನೀಡಿರುವ ಅತೀ ದೊಡ್ಡ ಪೆಟ್ಟು ಇದಾಗಿದ್ದು, ದೇಶದ ಪರೀಕ್ಷೆ ಇತಿಹಾಸದಲ್ಲಿ ಕಪ್ಪು ಚುಕ್ಕೆ ತಂದ ಕೀರ್ತಿ ಇವರದಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಾಜಿ ಮೇಯರ್ಗಳಾದ ಟಿ.ಬಿ. ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಆರ್.ಎಚ್.ಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜೆ.ವಿನಯ್ ಕುಮಾರ್, ಸದಸ್ಯರಾದ ಡೈರಿ ವೆಂಕಟೇಶ್, ಕಾಂಗ್ರೆಸ್ ಮುಖಂಡರಾದ ರವಿಶಂಕರ್, ಜೋಗಿ ಮಹೇಶ್, ಅಶೋಕಪುರಂ ಮಂಜುನಾಥ್, ರಮೇಶ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಸೋಮು ಕುರುಬಾರಳ್ಳಿ ಮತ್ತಿತರರು ಪಾಲ್ಗೊಂಡಿದ್ದರು.

# ಸಹಕಾರ ಕ್ಷೇತ್ರದಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ: ಎಂ ನಾರಾಯಣ

■ ಕನ್ನಡ ಮಾತೃ ಭೂಮಿ ವಾರ್ತೆ



**ಯಾದಗಿರಿ,ಜೂ.18-**ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ, ಬೆಂಗಳೂರು ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ, ಯಾದಗಿರಿ ಹಾಗೂ ಸಹಕಾರ ಇಲಾಖೆ ಯಾದಗಿರಿ ಹಾಗೂ ಕಲ್ಯಾಣ ಕರ್ನಾಟಕ ವಿವಿಧೋದ್ದೇಶ ಸಹಕಾರ ಸಂಘ ನಿ, ಶಹಾಪುರ ಇವರುಗಳ ಸಂಯುಕ್ತಾಕ್ಷರದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಸಹಕಾರ ಕ್ಷೇತ್ರ ಸರ್ವರಿಗೂ ಸಮಾಬಾಳು ಸರ್ವರಿಗೂ ಸಮಪಾಲು ಎಂಬಂತೆ ಸೇವೆಯನ್ನು ಸಮಾಜದ ಕಟ್ಟು ಕಡೆಯ ವ್ಯಕ್ತಿಗೆ ತಲುಪಿಸಿ ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸುವುದರ ಮುಖಾಂತರ ಅವರುಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದೇ ಸಹಕಾರ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ಎಂ ನಾರಾಯಣ ಉಪಾಧ್ಯಕ್ಷರು ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ, ಯಾದಗಿರಿ ಇವರು ಸಸಿಗೆ ನೀರು ಹಾಕುವುದರ ಮುಖಾಂತರ ಚಾಲನೆ ನೀಡಿ ಮಾತನಾಡಿದರು.

ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಣಾಧಿಕಾರಿಗಳು ಸಹಕಾರ ಸಂಘಗಳ ಕಾಯ್ದೆ ಕಾನೂನುಗಳ ಅರಿವು ಪಡೆದುಕೊಳ್ಳುವುದು ಜವಾಬ್ದಾರಿಯಾಗಿದೆ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಆರ್ಥಿಕ ಸಂಸ್ಥೆಯಾಗಿ ಪರಿವರ್ತನೆ ಆಗಬೇಕಾದರೆ ತಮ್ಮ ಸಹಕಾರ ಸಂಘಗಳಲ್ಲಿ ವಿವಿದುದ್ದೇಶ ವ್ಯವಹಾರಗಳನ್ನು ಮಾಡಿದಾಗ ಹಂತ ಹಂತವಾಗಿ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯ, ಹಾಗೂ ಸಹಕಾರ ಸಂಘಗಳಲ್ಲಿ ತರಬೇತಿ ಅತ್ಯವಶ್ಯ ವಾಗಿರುತ್ತದೆ ಕಾಯ್ದೆ ನಿಯಮಗಳು ಆಗಿಂದಾಗೆ ತಿದ್ದುಪಡಿಯಾಗುತ್ತಿದ್ದು ಅಂತಹ ತರಬೇತಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತರಬೇತಿ ಮಾಹಿತಿಯನ್ನು ಪಡೆದುಕೊಂಡು ತಮ್ಮ ಸಹಕಾರ ಸಂಘಗಳಲ್ಲಿ ಕೆಲಸ ಕಾರ್ಯ ನಿರ್ವಹಿಸಬೇಕೆಂದು ಶರಣು ಬಿ ಗದ್ದುಗೆ ಸಂಘದ ಅಧ್ಯಕ್ಷರು ಅಧ್ಯಕ್ಷತೆ ವಹಿಸಿ ಮಾತನಾಡಿದರು, ನಂತರ ಸಹಕಾರ ಕ್ಷೇತ್ರದ ಉಗಮ ಮತ್ತು ಅದರ ಬೆಳವಣಿಗೆ ಜೊತೆಗೆ ಆಡಳಿತ ಮಂಡಳಿ ನಿರ್ದೇಶಕರ ಹಕ್ಕು ಮತ್ತು ಕರ್ತವ್ಯ ಜವಾಬ್ದಾರಿ ಹಾಗೂ ಸಾಲ ವಸುಲಾತಿ ಕ್ರಮಗಳನ್ನು ಕ್ರಮಗಳನ್ನು ವಿವರವಾಗಿ ಅರುಣ್ ಕುಮಾರ್ ಬಿ.ಹರಸೂರ ಪ್ರಾಂಶುಪಾಲರು ಕೆ.ಐ. ಸಿ. ಎಂ. ಕಲಬುರಗಿ ಇವರು ವಿಶೇಷ ಉಪನ್ಯಾಸ ನೀಡಿದರು, ಅಮರೇಶ ಹಿರೇಮಠ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು ಶ್ರೀಮತಿ ಸುಜಾತ ಮಠ ಜಿಲ್ಲಾ ಸಹಕಾರ ಶಿಕ್ಷಕರು ಇವರು ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆ ಮಾಡಿದರು.

ಮುಖ್ಯ ಅತಿಥಿಗಳಾಗಿ ಶಾಂತಗೌಡ ಸಾಧ್ಯಪುರ ಒಕ್ಕೂಟದ ನಿರ್ದೇಶಕರು ಹಾಗೂ ದೇವಿಂದ್ರಪ್ಪ ವಿಶ್ವಕರ್ಮ ಸಹಕಾರ ಭಾರತಿ ಅಧ್ಯಕ್ಷರು ಶಾಪುರ್ ಚಂದ್ರಶೇಖರ್ ಪಾಟೀಲ್ ಸಗರನಾಡು ಪತಿನ ಸಹಕಾರ ಸಂಘದ ಕಾರ್ಯದರ್ಶಿ ಹಾಗೂ ಜೈನ್ ಸಂಘದ ನಿರ್ದೇಶಕರುಗಳು ಹಾಗೂ ಸಂಘದ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭ

# ವಿದ್ಯಾರ್ಥಿನಿಯರು ಉತ್ತಮ ಶಿಕ್ಷಣದ ಮೂಲಕ ತಮ್ಮ ಪೋಷಕರಿಗೆ ಕೀರ್ತಿ ತರಬೇಕು : ಹಿರಿಯ ಪತ್ರಕರ್ತ ಶಾಂತು ಹಿರೇಮಠ

■ ಕನ್ನಡ ಮಾತೃ ಭೂಮಿ ವಾರ್ತೆ



**ಸಿಂದಗಿ,ಜೂ.18-**ತಾಲೂಕಿನ ಶಿಕ್ಷಣ ಪ್ರಸಾರ ಮಂಡಳಿ ಮಹಿಳಾ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಗುರುವಾರ ಪ್ರಥಮ ಪಿಯುಸಿ ವಿದ್ಯಾರ್ಥಿನಿಯರ ಸ್ವಾಗತ ಸಮಾರಂಭ ಮಹಾವಿದ್ಯಾಲಯದ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮದ ಸಾನಿಧ್ಯವನ್ನು ಆರೂಢ ಮಠ, ರಾಂಪೂರದ ಶ್ರೀ ನಿತ್ಯಾನಂದ ಮಹಾರಾಜರು ವಹಿಸಿ ವಿದ್ಯಾರ್ಥಿನಿಯರಿಗೆ ಆಶೀರ್ವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಜಿ. ನೆಲ್ಲಗಿ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎ.ಆರ್. ಹೆಗ್ಗನದೊಡ್ಡಿ, ದಿವಂಗತ ಎಂ.ಸಿ. ಮನಗೂಳಿ ಅವರು ಸಿಂದಗಿಯನ್ನು ಶಿಕ್ಷಣ ಕಾಶಿಯನ್ನಾಗಿ ಮಾಡುವ ಕನಸು ಕಂಡಿದ್ದರು. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಪತ್ರಕರ್ತ ಹಾಗೂ ವಿಶ್ರಾಂತ ಉಪನ್ಯಾಸಕ ಶಾಂತು ಹಿರೇಮಠ, 1944ರಲ್ಲಿ ಆರಂಭಗೊಂಡ ಈ ಸಂಸ್ಥೆ ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿದೆ. ಇಂದಿನ ದಿನಗಳಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿದ್ದು, ವಿದ್ಯಾರ್ಥಿನಿಯರು ಉತ್ತಮ ಶಿಕ್ಷಣದ ಮೂಲಕ ತಮ್ಮ ಪೋಷಕರಿಗೆ ಕೀರ್ತಿ ತರಬೇಕು ಎಂದು ಕರೆ ನೀಡಿದರು.

ಸಂಸ್ಥೆಯ ನಿರ್ದೇಶಕ ವಿ.ಬಿ. ಕುರೂಡೆ ಮಾತನಾಡಿ, ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಪ್ರಜೆಗಳಾಗಬೇಕು ಎಂದರು. ಅತಿಥಿಯಾಗಿ ಭಾಗವಹಿಸಿದ್ದ ಡಾ. ಜೆ.ಸಿ. ನಂದಿಕೋಲ ಮಾತನಾಡಿ, ವಿದ್ಯಾರ್ಥಿನಿಯರು ದೊಡ್ಡ ಗುರಿಗಳನ್ನು ಹೊಂದಿ ಶ್ರಮಿಸಿದರೆ ಯಶಸ್ಸು ಸಾಧಿಸಬಹುದು. ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಹಾಗೂ ಪೋಷಕರ ಕನಸುಗಳನ್ನು ನನಸಾಗಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕಾ ಶಿಕ್ಷಣ ಪ್ರಸಾರ ಮಂಡಳಿಯ ಸದಸ್ಯರು, ಉಪನ್ಯಾಸಕರಾದ ಸಿದ್ದಲಿಂಗ ಕಿಣಗಿ, ಸತೀಶ್ ಬಸರಕೋಡ, ಮಹಿಳಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಜು.3ರಂದು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ದಲಿತ ಜನಾಗ್ರಹ ಸಮಾವೇಶ



■ ಕನ್ನಡ ಮಾತೃ ಭೂಮಿ ವಾರ್ತೆ

**ಯಾದಗಿರಿ,ಜೂ.18-**ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ವತಿಯಿಂದ ಜುಲೈ 3ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿರುವ ದಲಿತ ಜನಾಗ್ರಹ ಸಮಾವೇಶದ ಕರ ಪತ್ರ ಬಿಡುಗಡೆ ಮಾಡಿದರು.

ಯಾದಗಿರಿ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಮಣ್ಣ ಕಲ್ಲದೇವನಹಳ್ಳಿ ಮಾತನಾಡಿದ ಅವರು,ಭೂಮಿ, ವಸತಿ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ,ಉದ್ಯೋಗ ನೇಮಕಾತಿ, ವಿಶೇಷ ಘಟ ಕ ಯೋಜನೆ ಸೇರಿದಂತೆ ಇನ್ನಿತರ ಬೇಡಿಕೆಗಳು ಹಾಗೂ ಏಕಗವಾಕ್ಷಿ

ನೀತಿ ಜಾರಿಗೆ ಒತ್ತಾಯಿಸಿ ನಮ್ಮ ಸಂಘಟನೆಯಿಂದ ದಲಿತ ಜನಾಗ್ರಹ ಸಮಾವೇಶವನ್ನು ಅನಿರ್ದಿಷ್ಟ ಪ್ರತಿಭಟನೆ ಅತ್ಯಂತ ಪ್ರಮುಖವಾದ ಹೋರಾಟವಾಗಿದೆ ಎಂದು ರಾಜ್ಯ ಸಂಘಟನಾ ಸಂಚಾಲಕರಾದ ರಾಮಣ್ಣ ಕಲ್ಲದೇವನಹಳ್ಳಿ ಹೇಳಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ 2013ರಲ್ಲಿ ಜಾರಿಗೆ ಬಂದ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಕಾಯ್ದೆಗಳ ಮೂಲ ಉದ್ದೇಶಗಳು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಭೂ ಒಡೆತನಕ್ಕಾಗಿ ಸಲ್ಲಿಕೆಯಾಗಿರುವ ಸಾವಿರಾರು ಅರ್ಜಿಗಳು ವರ್ಷಗಳಿಂದ ವಿಲೇವಾರಿಯಾಗದೆ ಉಳಿದಿವೆ. ಅನುದಾನದ ಕೊರತೆಯ ನೆಪ ಹೇಳಿ ಫಲಾನುಭವಿಗಳನ್ನು ಅಲೆದಾಡಿಸಲಾಗುತ್ತಿದ್ದು, ತಮ್ಮ ಮೂಲಭೂತ ಹಕ್ಕುಗಳಿಗಾಗಿ ಬಡವರು ಕಚೇರಿಗಳ ಸುತ್ತ ಸುತ್ತುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶೋಷಿತ ಸಮುದಾಯಗಳ ಬಗ್ಗೆ ಸರ್ಕಾರದ ನಿರುತ್ಸಾಹ ಧೋರಣೆಯನ್ನು ಖಂಡಿಸಿ ನಡೆಯುವ ಸಮಾವೇಶದಲ್ಲಿ ವಿವಿಧ ಜಿಲ್ಲೆಯಿಂದ ನಮ್ಮ ಸಂಘಟನೆಯ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ನಾಗಣ್ಣ ಬಡಿಗೇರ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕಲ್ಬುರ್ಗಿ ವಿಭಾಗೀಯ ಸಂಘಟನಾ ಸಂಚಾಲಕಾದ ಮರಳಸಿದ್ದ ನಾಯ್ಕಲ್, ಮಾಳಪ್ಪ ಕಿರದಹಳ್ಳಿ ಯಾದಗಿರಿ ಜಿಲ್ಲಾಧ್ಯಕ್ಷರು, ನಿಂಗಪ್ಪ ಬೀರನಾಳ, ಪರಶುರಾಮ್, ಆಜನೇಯ, ಶರಣಪ್ಪ, ಅನಿಲ್ ಅನವಾರ ಇದ್ದರು.

# ಕೂಲಿಕಾರರು ಕೆಲಸದ ಜೊತೆಗೆ ಆರೋಗ್ಯದ ಕಡೆ ಗಮನಹರಿಸಬೇಕು : ಬಸವರಾಜ ಸಂಕಗೊಂಡ

■ ಕನ್ನಡ ಮಾತೃ ಭೂಮಿ ವಾರ್ತೆ



**ವಿಜಯಪುರ,ಜೂ.18-**ಜಿಲ್ಲೆಯ ತಿಕೋಟಾ ತಾಲೂಕಿನ ತಾಜಪುರ ಹೆಚ್ ಗ್ರಾಮ ಪಂಚಾಯತಿಯಲ್ಲಿ ಮನರೇಗಾ ಕಾಮಗಾರಿ ಸ್ಥಳದಲ್ಲಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ ಗ್ರಾಮ ಪಂಚಾಯತಿ ವತಿಯಿಂದ ಉಚಿತ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಯಿತು. ಎಡಿ ಬಸವರಾಜ ಸಂಕಗೊಂಡ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರ.

ಗ್ರಾಮದಲ್ಲಿ ಮನರೇಗಾ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕೂಲಿಕಾರರು ತಮ್ಮ ಕೆಲಸದ ಜೊತೆಗೆ ಆರೋಗ್ಯದ ಕಡೆ ಗಮನಹರಿಸುವುದು ಅತೀ ಮುಖ್ಯವಾಗಿದೆ. ಒಬ್ಬ ವ್ಯಕ್ತಿಗೆ ಆರೋಗ್ಯಕ್ಕಿಂತ ದೊಡ್ಡದಾದ ಭಾಗ್ಯ ಯಾವುದೂ ಇಲ್ಲ. ಇದನ್ನು ಅರಿತು ಗ್ರಾಮ ಪಂಚಾಯತಿ ಪಿಡಿಓ ಉಮೇಶ ಕನಮಡಿ ಅವರ ಮುಂದಾಳತ್ವದಲ್ಲಿ ಆರೋಗ್ಯ ಶಿಬಿರ ಆಯೋಜಿಸಿರುವುದು ನಿಜಕ್ಕೂ ಶ್ಲಾಘನೀಯ.

ಕೂಲಿಕಾರರು ವೈದ್ಯರು ನೀಡುವ ಮಾತ್ರೆಗಳನ್ನು ಸರಿಯಾಗಿ ಪಡೆದುಕೊಳ್ಳಿ ಮತ್ತು ಅವರು ನೀಡುವ ಸಲಹೆಗಳನ್ನು ತಪ್ಪದೇ ಪಾಲಿಸಿ ಎಂದರು.

ನರೇಗಾದಡಿ ಕೆಲಸ ಮಾಡುವ ಕೂಲಿಕಾರರು ದಿನವಿಡೀ ಬಿಸಿಲು, ಧೂಳು, ಮಳೆ ಎನ್ನದೇ ದುಡಿಯುತ್ತಾರೆ. ಇದನ್ನು ಗಮನಿಸಿ ಗ್ರಾಮ ಪಂಚಾಯತಿಯವರು ನರೇಗಾ ಕೂಲಿಕಾರರ ಆರೋಗ್ಯ ಶಿಬಿರ ಆಯೋಜಿಸಿದೆ. ಇಂತಹ ಆರೋಗ್ಯ ಶಿಬಿರದಿಂದ ಜನರಲ್ಲಿ ಚೈತನ್ಯ ಹೆಚ್ಚಳವಾಗಿ ಕೆಲಸವು ಬಹಳ ಅಚ್ಚುಕಟ್ಟಾಗಿ ಆಗುತ್ತದೆ. ಕೂಲಿಕಾರರ ಸಾಮರ್ಥ್ಯ ಹೆಚ್ಚುತ್ತದೆ. ಅವರಲ್ಲಿ ಸಕಾರಾತ್ಮಕತೆ ಹೆಚ್ಚಳವಾಗುತ್ತದೆ. ಆರೋಗ್ಯದ ಕುರಿತು ಮಾಹಿತಿ ದೊರೆಯುತ್ತದೆ. ಸ್ವಚ್ಛತೆಯ ಅರಿವು ಮೂಡುತ್ತದೆ. ಹೀಗೆ ಈ ಶಿಬಿರದಿಂದ ಜನರಿಗೆ ಬಹಳಷ್ಟು ಅನುಕೂಲವಿದೆ ಎಂದರು.

ಈ ಆರೋಗ್ಯ ಶಿಬಿರದಲ್ಲಿ ಆರೋಗ್ಯ ಉಪಕೇಂದ್ರ, ತಾಜಪುರ ಹೆಚ್ ಮತ್ತು ವಿಜಯಪುರದ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಶನ್ ವೈದ್ಯರು ಹಾಜರಾಗಿ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸಿದರು.

ಈ ಸಂದರ್ಭದಲ್ಲಿ ತಾಲೂಕು ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕ ಕಲ್ಲಪ್ಪ ನಂದರಗಿ, ಗ್ರಾಮ ಪಂಚಾಯತಿ ಕಾರ್ಯ ದರ್ಶಿ ಚಂದ್ರಶೇಖರ ಬಿದರಿ, ಸಹಾಯಕ ಅಭಿಯಂತ ರರಾದ ಶ್ರೀಧರ ಸಾವಳಗಿ, ವಿಜಯಪುರದ ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಶನ್ ನ ಸುಮಂಗಲಾ ಬೇನಾಳ, ರಾಘವೇಂದ್ರ ಪೂಜಾರಿ, ಆರೋಗ್ಯ ಉಪಕೇಂದ್ರದ ಕೆ.ವಾಯ್.ಕುಂಬಾರ, ಡಿಇಓ ಹಾಜಿಸಾಬ ಮುಲ್ಲಾ, ಕಾಯಕ ಬಂಧು ಹನಮಂತ ಕಬ್ಬೂರ, ಗ್ರಾಮ ಪಂಚಾಯತಿಯ ಇಬ್ರಾಹಿಂ ಮೊಕಾಶಿ, ರಾಜಕುಮಾರ ಮಸೂತಿ ಸೇರಿದಂತೆ ಇತರರು ಇದ್ದರು.

# ನೀಟ್(ಯುಜಿ) ಮರು ಪರೀಕ್ಷೆ ಸುಸೂತ್ರ, ಪಾರದರ್ಶಕವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಿ-ತುಕಾರಾಮ ಪಾಂಡ್ವೆ

■ ಕನ್ನಡ ಮಾತೃ ಭೂಮಿ ವಾರ್ತೆ



**ಯಾದಗಿರಿ,ಜೂ.18-NEET** ಮರುಪರೀಕ್ಷೆಯನ್ನು ನಕಲು ಮುಕ್ತ, ಪಾರದರ್ಶಕ ಹಾಗೂ ವ್ಯವಸ್ಥಿತವಾಗಿ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಪರೀಕ್ಷೆ ಕುರಿತು ಪೂರ್ವಭಾವಿ ಸಿದ್ದತಾ ಸಭೆ ನಡೆಸಿದ ಅವರು, ಇದೇ ಜೂನ್ 21 ರಂದು ಯಾದಗಿರಿ ನಗರದ ಆರು ಪರೀಕ್ಷಾ ಕೇಂದ್ರಗಳಲ್ಲಿ ನಡೆಯುವ ಈ ಪರೀಕ್ಷೆಗೆ ಒಟ್ಟು 2067 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಈ ಪರೀಕ್ಷೆಗಾಗಿ ಒಟ್ಟು 174 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಪ್ರತಿಯೊಂದು ಪರೀಕ್ಷಾ ಕೇಂದ್ರ ದಲ್ಲಿ ತಲಾ ಒಬ್ಬರಂತೆ ಪರೀಕ್ಷಾ ಕೇಂದ್ರದ ವೀಕ್ಷಕರನ್ನಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಯಿಂದ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಪ್ರತಿ ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಇಬ್ಬರು ಮೇಲ್ವಿಚಾರಕರು ಇರಲಿದ್ದಾರೆ. ಪರೀಕ್ಷೆ ಅಭ್ಯರ್ಥಿಗಳ ತಪಾಸಣೆಗೆ ಎನ್ ಟಿ ಎ ದಿಂದ ತಪಾಸಣಾ ಸಾಮಗ್ರಿ ಹಾಗೂ ಅಗತ್ಯ ಸಿಬ್ಬಂದಿಗಳನ್ನು ಒದಗಿಸಿದೆ. ಸಂಬಂಧಿಸಿದ ಅಧಿಕಾರಿಗಳು ನಿಯಮಗಳಂತೆ ಯಾವುದೇ ಲೋಪವಾಗದಂತೆ ಪರೀಕ್ಷೆ ನಡೆಸಬೇಕು. ಪರೀಕ್ಷಾ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ಆಸನಗಳ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ನಕಲು ಅಥವಾ ಸಾಮೂಹಿಕ ನಕಲು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮಾರ್ಗಸೂಚಿಯಂತೆ ಪರೀಕ್ಷೆ ಸಿಸಿಟಿವಿ ಕಣ್ಗಾವಲು ನಲ್ಲಿ ನಡೆಸಲಾಗುತ್ತಿದ್ದು, ಸಿಸಿ ಟಿವಿ ಕಾರ್ಯನಿರ್ವಹಣೆ ಬಗ್ಗೆ ಮುಂಚಿತವಾಗಿ ಖಾತ್ರಿಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ವೈದ್ಯಕೀಯ ಚಿಕಿತ್ಸೆಗಾಗಿ ತುರ್ತು ಚಿಕಿತ್ಸಾ ಅಂಬ್ಯುಲೆನ್ಸ್ ಸಿದ್ಧವಾಗಿಟ್ಟುಕೊಳ್ಳಬೇಕು.ಈ ಬಾರಿ ಈ ಪರೀಕ್ಷೆ ಬಿಗುವಿನಿಂದ ನಡೆಸಲಾಗುತ್ತಿದ್ದು, ಪೋಲಿಸ್ ಉಪಅಧೀಕ್ಷಕರು-1, ಸಿಪಿಐ-1, ಪೋಲಿಸ್ ಸಬ್ ಇನ್ಸ್ಪೆಕ್ಟರ್-6, ಸಹಾಯಕ ಸಬ್ ಇನ್ಸ್ಪೆಕ್ಟರ್-2 ಹಾಗೂ 10-ಮುಖ್ಯ ಪೇದೆಗಳು, 12-ಮಹಿಳಾ ಪೇದೆಗಳು ಸೇರಿದಂತೆ ಒಟ್ಟು 48 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಕೇಂದ್ರ ಸೈನಿಕ ದಳದ ತಲಾ ಇಬ್ಬರು ಯೋಧರನ್ನು ಸಹ ನೇಮಿಸಲಾಗುತ್ತಿದೆ. ಪರೀಕ್ಷಾ ಕಾರ್ಯಗಳ ಮೇಲ್ವಿಚಾರಣೆಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಪರೀಕ್ಷೆ ಸಂದರ್ಭದಲ್ಲಿ ಸೂಕ್ತ ಬಸ್ ಗಳ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರಗಳಿಗೆ ವಿದ್ಯುತ್ ಅಡಚಣೆಯಾಗದಂತೆ ಕ್ರಮ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ತೀವ್ರ ಕಣ್ಗಾವಲಿನಲ್ಲಿ ಈ ಪರೀಕ್ಷೆ ನಡೆಯುತ್ತಿದ್ದು, ಯಾವುದೇ ಲೋಪಗಳಿಗೆ ಅವಕಾಶ ನೀಡದಂತೆ ಅವರು ಸೂಚನೆ ನೀಡಿ, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ವೈದ್ಯಾಧಿಕಾರಿಯನ್ನು ನೇಮಿಸಲು ಸೂಚಿಸಿ, ಮುನ್ನೆಚ್ಚರಿಕೆಯಾಗಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷೆ ಅಭ್ಯರ್ಥಿಗಳ ಸ್ಕ್ಯಾನಿಂಗ್ ಕೂಡ ಮಾಡಲಾಗುತ್ತದೆ. ಪರೀಕ್ಷೆ ಕೊಠಡಿಯೊಳಗೆ ಎಲೆಕ್ಟ್ರಾನಿಕ್ ವಸ್ತುಗಳು, ಮೋಬೈಲ್, ಪೆನ್ ಡ್ರೈವ್,ಇಯರ್ಫೋನ್, ಮೈಕ್ರೋ ಫೋನಗಳು, ಬ್ಲೂಟೂತ್ ಸಾಧನ, ಕೈಗಡಿಯಾರ ಅನುಮತಿಸಲಾಗುವುದಿಲ್ಲ. ವಿದ್ಯಾರ್ಥಿಗಳಾಗಲಿ, ಸಿಬ್ಬಂದಿಗಳಾಗಲಿ ಮೋಬೈಲ್ ಬಳಕೆಗೆ, ಫೋಟೋಗ್ರಾಫಿಗೆ ಸಂಪೂರ್ಣ ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದರು.

ಪಾರದರ್ಶಕವಾಗಿ ಪರೀಕ್ಷೆ ನಡೆಸ ಲು ಮುಂಚಿತವಾಗಿ ಸಭೆ ಮಾಡಿ, ನವದೆಹ ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಮಾರ್ಗಸೂಚಿಯನ್ವಯ ನಿಯಮಗಳಂತೆ ಪರೀಕ್ಷೆ ನಡೆಸಲು ಅವರು ಸೂಚಿಸಿದರು. ಸುಸೂತ್ರ ಪರೀಕ್ಷೆಗೆ ಪೋಲಿಸ್ ಇಲಾಖೆ, ಖಜಾನೆ ಇಲಾಖೆ, ಸಂಬಂಧಿಸಿ ದ ಇಲಾಖೆಗಳ ಸಹಕಾರಕ್ಕೆ ಸೂಚಿಸಲಾಗಿದೆ. ಪರೀಕ್ಷೆ ಕೇಂದ್ರದ ಹೊರಗೆ ಜನಸಂದಣಿ ಮೇಲೆ ನಿಗಾ ಇಡಬೇಕು. ನಿಗದಿತ ಪರೀಕ್ಷಾ ಸಮಯ ಪರಿಪಾಲನೆ ಮಾಡಬೇಕು. ಮಧ್ಯಾಹ್ನ 2 ರಿಂದ ಸಂಜೆ 5-15 ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, ವಿಶೇಷ ಚೇತನರಿಗೆ ಹೆಚ್ಚುವರಿ ಒಂದು ಗಂಟೆ ಕಾಲಾವಕಾಶ ನೀಡಲಾಗುತ್ತದೆ. ಅದರಂತೆ ಈ ಬಾರಿಯ ಪರೀಕ್ಷೆಯಲ್ಲಿ ಎಲ್ಲ ಅಭ್ಯರ್ಥಿಗಳಿಗೆ ಹೆಚ್ಚುವರಿ 15 ನಿಮಿಷಗಳ ಕಾಲಾವಕಾಶ ಸಹ ನೀಡಲಾಗುತ್ತಿರುವುದು ವಿಶೇಷವಾಗಿದೆ ಎಂದು ಅವರು ಹೇಳಿದರು.

ಅಧಿಕಾರಿಗಳು ಜವಾಬ್ದಾರಿಯುತವಾಗಿ ಹಾಗೂ ಸಮನ್ವಯತೆಯಿಂದ ಕಾರ್ಯನಿರ್ವಹಿಸಲು ಜಿಲ್ಲಾಧಿಕಾರಿಗಳು ಸೂಚಿಸಿ ಪರೀಕ್ಷೆಗೆ ನಗರ ಸಂಯೋಜಕರಾಗಿ ಪದವಿ ಕಾಲೇಜು ಪ್ರಾಂಶುಪಾಲ ಡಾ. ಸುಭಾಷಚಂದ್ರ ಕೌಲಗಿ ಅವರನ್ನು ನಿಯೋಜಿಸಿದ್ದು, ಪರೀಕ್ಷೆಗೆ ನಿಯೋಜಿತಗೊಂಡವರು ಇವರಿಂದ ಹೆಚ್ಚಿನ ಮಾಹಿತಿ ಪಡೆಯಲು ಅವರು ಸೂಚಿಸಿದರು.

ಪರೀಕ್ಷೆ ಕೇಂದ್ರಗಳ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯಗಳ ವ್ಯವಸ್ಥೆ ಸರಿಯಾಗಿರಬೇಕು. ಸಿಸಿ ಟಿವಿ, ಬಳಸುವ ವಾಹನಗಳು,ವೆಬ್ ಕಾಸ್ಟಿಂಗ್ ಸರಿಯಾಗಿರಬೇಕು. ನಿರಂತರ ವಿದ್ಯುತ್ ಸೌಲಭ್ಯ ಇರಬೇಕು. ಈ ಎಲ್ಲ ಸೌಲಭ್ಯಗಳಿಗಾಗಿ ಕಟ್ಟುನಿಟ್ಟಿನ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಪ್ರದೇಶ ವ್ಯಾಪ್ತಿಯಲ್ಲಿ ದಂಡ ಪ್ರಕ್ರಿಯೆ ಬಿ.ಎನ್.ಎಸ್.ಎಸ್ 2023 ರ ಕಲಂ 163 ರ ಅನ್ವಯ ದಿನಾಂಕ: 21-6-26ರಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5-30 ರವರೆಗೆ ಆರೂ ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಅವರು ಹೇಳಿದರು.

ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಧರಣೇಶ, ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ವಿಜಯಕುಮಾರ ಮಡ್ಡೆ, ಪದವಿ ಕಾಲೇಜು, ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು. ಸರ್ಕಾರಿ ಪದವಿ ಕಾಲೇಜು ಪ್ರಾಂಶುಪಾಲ ಡಾ. ಸುಭಾಷ್ ಚಂದ್ರ ಕೌಲಗಿ ಸ್ವಾಗತಿಸಿದರು.

# 2 ಸಾವಿರ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ರಸ್ತೆಗಳ ಮರುಡಾಂಬರೀಕರಣಕ್ಕೆ ಚಾಲನೆ-ಕೃಷ್ಣ ಬೈರೇಗೌಡ



■ ಕನ್ನಡ ಮಾತೃ ಭೂಮಿ ವಾರ್ತೆ

**ಬೆಂಗಳೂರು,ಜೂ.18-**ಎರಡು ಸಾವಿರ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ ಐದು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಮರು ಡಾಂಬರೀಕರಣಕ್ಕೆ ಚಾಲನೆ ನೀಡಲಾಗುವುದು ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಗುರುವಾರ ಹೇಳಿದ್ದಾರೆ.

ಇಂದು ಎಆಅ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಬೆಂಗಳೂರಿನ ಐದು ವಲಯ ಆಯುಕ್ತರು ಮತ್ತು ಕಸ ನಿರ್ವಹಣೆ ಇಲಾಖೆಯ ಅಧಿಕಾರಿಗಳ ಜೊತೆಗೆ ಸಭೆ ಮಾಡಿದ್ದೇನೆ. ಬೆಂಗಳೂರಿನಲ್ಲಿ ರಸ್ತೆ ಸುಧಾರಣೆ ಮಾಡಬೇಕು ಅನ್ನೋ ಉದ್ದೇಶವಿದೆ ಎಂದರು.

ಐದು ಮಹಾನಗರ ಪಾಲಿಕೆಯ ಆಂತರಿಕ ರಸ್ತೆಗಳನ್ನು ಸರಿ ಮಾಡಬೇಕು. ಎಲ್ಲೆಲ್ಲಿ ಆಂತರಿಕ ರಸ್ತೆಗಳು ಹಾಳಾಗಿದೆಯೋ ಅವುಗಳನ್ನ ಸರಿ ಮಾಡಲು ವಿಶೇಷವಾಗಿ 2000 ಕೋಟಿ ರೂ. ವೆಚ್ಚದಲ್ಲಿ ಮರು ಡಾಂಬರೀಕರಣಕ್ಕೆ ಚಾಲನೆ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಆದೇಶವನ್ನ ಹೊರಡಿಸಿದೆ. ಮೊದಲು ಹದಗೆಟ್ಟಿರೋ ರಸ್ತೆಯನ್ನು ಗುರುತಿಸಿ, ನಂತರ ಅದಕ್ಕೆ ತಗಲುವ ವೆಚ್ಚವನ್ನ ಅಂದಾಜಿಸಬೇಕು. ಬಳಿಕ ಅಲ್ಪಾವಧಿ ಟೆಂಡರ್ ನೀಡಬೇಕು. ಶೀಘ್ರದಲ್ಲೇ ಕಾಮಗಾರಿ ಮಾಡಬೇಕು ಎಂದರು.

**ರಸ್ತೆಗೆ ಕಸ ತಂದು ಹಾಕೋದನ್ನು ನಿಲ್ಲಿಸಬೇಕು**

ರಾಜ್ಯ ಸರ್ಕಾರ ವಾರ್ಡ್ ರಸ್ತೆಗಳ ಬಗ್ಗೆ ವಿಶೇಷವಾದ ಅನುದಾನ ನೀಡಿದೆ. ಇದಕ್ಕೆ ಜನರ ಸಹಕಾರ ಬಹಳ ಮುಖ್ಯ. ಜನರು ಸಹಕಾರ ನೀಡಿದ್ರೇ ಕಸದ ಸಮಸ್ಯೆ ಕಡಿಮೆ ಆಗಲಿದೆ.

ನಿಮ್ಮ ಮನೆಯ ಬಳಿ ಕಸದ ಗಾಡಿ ಬರದೇ ಇದ್ರೇ ಅದನ್ನ ನಮ್ಮ ಗಮನಕ್ಕೆ ತನ್ನಿ. ಕಸದ ವಾಹನ ಬರುವಂತೆ ಮಾಡೋದು ನಮ್ಮ ಕರ್ತವ್ಯ. ಅದನ್ನು ಮಾಡುತ್ತೇವೆ. ಕಸದ ಗಾಡಿ ಬಂದ್ರು ರಸ್ತೆ ಬದಿಗೆ ಹಾಕಿದ್ರೇ ಬೆಂಗಳೂರಿನ ಆರೋಗ್ಯಕ್ಕೂ ಮಾರಕ.

ನಾವು ನಮ್ಮ ಸಿಸ್ಟಮ್ ಅನ್ನು ಬದಲಾವಣೆ ಮಾಡಲು ಸಿದ್ದರಾಗಿದ್ದೇವೆ. ರಸ್ತೆಗೆ ಕಸ ಹಾಕಿದ್ರೇ ಅದನ್ನ ತೆಗೆಯೋದು ಕಷ್ಟಸಾಧ್ಯವಾಗಿದೆ. ಹೀಗಾಗಿ ಜನರು ನಮಗೆ ಸಹಕಾರ ಕೊಡಿ. ನಾವು ನಮ್ಮ ಇಲಾಖೆಯ ಸುಧಾರಣೆ ಮಾಡುತ್ತೇವೆ ಎಂದು ಸಚಿವರು ಹೇಳಿದರು.

ಬರೋ ದಿನಗಳಲ್ಲಿ ನಾನು ಕೂಡ ಫೀಲ್ಡ್‌ಗೆ ಹೋಗುತ್ತೇನೆ. ಆಗ ಕಠಿಣ ಕ್ರಮಗಳನ್ನ ಕೈಗೊಳ್ಳುತ್ತೇವೆ. ಜನರು ಕೂಡ ಕಸವನ್ನು ರಸ್ತೆಗೆ ತಂದು ಹಾಕೋದನ್ನು ನಿಲ್ಲಿಸಬೇಕು.

ನಮ್ಮ ಸಿಬ್ಬಂದಿ ಬೆಳಗ್ಗೆ ಹೋಗಿ ಕಸ ತೆಗೆಯುತ್ತಾರೆ. ಮಧ್ಯಾಹ್ನದ ವೇಳೆಗೆ ಮತ್ತೆ ಕಸ ತುಂಬಿರುತ್ತೆ. ಶೇ.10ರಷ್ಟು ಜನ ಕಸವನ್ನು ತಂದು ಹಾಕುತ್ತಿದ್ದಾರೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಸಭೆಯಲ್ಲಿ ಮುಖ್ಯ ಆಯುಕ್ತರಾದ ಮಹೇಶ್ವರ್ ರಾವ್, ನಗರ ಪಾಲಿಕೆ ಆಯುಕ್ತಾದ ರಮೇಶ್ ಡಿ.ಎಸ್, ಪೊಮ್ಮಲ ಸುನೀಲ್ ಕುರ್ಮಾ, ಜಿ.ಜಗದೀಶ್, ರಮೇಶ್ ಕೆ.ಎನ್,

ಡಾ. ರಾಜೇಂದ್ರ, ಕೆ.ವಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಓ ಕರೀಗೌಡ, ಸಿಓಓ ರಮಾಮಣಿ, ಸಿಎಫ್‌ಓ ರಾಜು, ಸಿಜಿಎಂ ರಾಜೇಶ್, ಡಿಜಿಎಂ, ಎಜಿಎಂಗಳು ಸೇರಿದಂತೆ ಮತ್ತಿತರ ಅಧಿಕಾರಿಗಳು ಉಪಸ್ತಿತರಿದ್ದರು.

# ಕರಾವಳಿಯಲ್ಲಿ ಮಳೆ ಕೊರತೆ: ನೀರು ಸಂಗ್ರಹಣೆಗೆ ತುಂಬೆ ಡ್ಯಾಂ ಗೇಟ್ ಬಂದ್

**ಮಂಗಳೂರು,ಜೂ.18-**ಸಾಮಾನ್ಯವಾಗಿ ಜೂನ್ ಮಧ್ಯಭಾಗಕ್ಕೆ ಕರಾವಳಿಯಲ್ಲಿ ಮುಂಗಾರು ತನ್ನ ಅಬ್ಬರವನ್ನು ತೋರಿಸಿ ನದಿಗಳು ತುಂಬಿ ಹರಿಯುವುದು, ಮಂಗಳೂರಿನ ಕುಡಿಯುವ ನೀರಿನ ಮೂಲವಾದ ತುಂಬೆ ಡ್ಯಾಂ ಭರ್ತಿಯಾಗುತ್ತಿತ್ತು. ಆದರೆ ಈ ಬಾರಿ ಪ್ರಕೃತಿ ಸಂಪೂರ್ಣ ಭಿನ್ನ ಚಿತ್ರಣ ಮೂಡಿಸಿದೆ. ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದ ಕಾರಣ ಜಿಲ್ಲೆಯ ಪ್ರಮುಖ ಜಲಮೂಲಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿದ್ದು, ಕುಡಿಯುವ ನೀರಿನ ಹಿತದೃಷ್ಟಿಯಿಂದ ತುಂಬೆ ಡ್ಯಾಂನ ಎಲ್ಲ ಗೇಟ್‌ಗಳನ್ನು ಮುಚ್ಚಿ ನೀರನ್ನು ಸಂರಕ್ಷಿಸಲಾಗುತ್ತಿದೆ.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಜೂನ್ 17ರ ಪರಿಸ್ಥಿತಿ ವರದಿ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 24 ಗಂಟೆಗಳಲ್ಲಿ ಸಾಮಾನ್ಯವಾಗಿ 36.5 ಮಿ.ಮೀ. ಮಳೆಯಾಗಬೇಕಿತ್ತು. ಆದರೆ ಕೇವಲ 3.3 ಮಿ.ಮೀ. ಮಳೆ ಮಾತ್ರ ದಾಖಲಾಗಿದೆ. ಜನವರಿ 1ರಿಂದ ಜೂನ್ 17ರವರೆಗೆ ಜಿಲ್ಲೆಯಲ್ಲಿ ಸಾಮಾನ್ಯವಾಗಿ 668.7 ಮಿ.ಮೀ. ಮಳೆಯಾಗಬೇಕಿತ್ತು, ಆದರೆ ಕೇವಲ 390.7 ಮಿ.ಮೀ. ಅಂದರೆ ವಾಡಿಕೆಗಿಂತ ಅರ್ಧದಷ್ಟು ಕಡಿಮೆ ಮಳೆ ದಾಖಲಾಗಿದೆ. ಈವರೆಗಿನ ತಾಲೂಕುವಾರು ಮಳೆ ಮಾಹಿತಿ: ಇದೇ ಸಮಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯ ಎಲ್ಲ ತಾಲೂಕುಗಳಲ್ಲೂ ಮಳೆ ಪ್ರಮಾಣದಲ್ಲಿ ಭಾರಿ ಕೊರತೆ ಕಂಡುಬಂದಿದೆ. ತಾಲೂಕುವಾರು ಮಳೆಯ ಮಾಹಿತಿ ಹೀಗಿದೆ.

ನದಿ ನೀರಿನ ಮಟ್ಟದಲ್ಲಿ ಇಳಿಕೆ: ಮಳೆ ಕೊರತೆಯ ಪರಿಣಾಮ ಜಿಲ್ಲೆಯ ಪ್ರಮುಖ ನದಿಗಳ ನೀರಿನ ಮಟ್ಟದಲ್ಲೂ ಗೋಚರಿಸಿದೆ. ಬಂಟ್ವಾಳದ ನೇತ್ರಾವತಿ ನದಿಯಲ್ಲಿ ಅಪಾಯದ ಮಟ್ಟ 9 ಮೀಟರ್ ಇದ್ದರೆ, ಪ್ರಸ್ತುತ ನೀರಿನ ಮಟ್ಟ ಕೇವಲ 4.58 ಮೀಟರ್ ಇದೆ. ಉಪ್ಪಿನಂಗಡಿಯ ನೇತ್ರಾವತಿ ನದಿಯಲ್ಲಿ 31.5 ಮೀಟರ್‌ಗೆ ಹೋಲಿಸಿದರೆ 23.70 ಮೀರ್ಟ, ಗುರುಪುರ ನದಿಯಲ್ಲಿ 6.5 ಮೀಟರ್‌ಗೆ ಹೋಲಿಸಿದರೆ ಕೇವಲ 1.22 ಮೀಟರ್ ಹಾಗೂ ಕುಮಾರಧಾರಾ ನದಿಯಲ್ಲಿ 84.325 ಮೀಟರ್‌ಗೆ ಹೋಲಿಸಿದರೆ 76.82 ಮೀಟರ್ ನೀರಿನ ಮಟ್ಟ ದಾಖಲಾಗಿದೆ. ಎಲ್ಲ ಪ್ರಮುಖ ನದಿಗಳೂ ಅಪಾಯದ ಮಟ್ಟಕ್ಕಿಂತ ಸಾಕಷ್ಟು ಕೆಳಗಿದ್ದು, ಮುಂಗಾರು ಈವರೆಗೆ ನಿರೀಕ್ಷಿತ ಬಲ ಪಡೆದುಕೊಂಡಿಲ್ಲ ಎಂಬುದು ಸ್ಪಷ್ಟವಾಗಿದೆ.

ತುಂಬೆ ಡ್ಯಾಂನ ಎಲ್ಲ ಗೇಟ್‌ಗಳು ಬಂದ್: ಮಂಗಳೂರಿಗೆ ಕುಡಿಯುವ ನೀರು ಪೂರೈಸುವ ತುಂಬೆ ಡ್ಯಾಂನಲ್ಲಿ ಗರಿಷ್ಠ ನೀರಿನ ಮಟ್ಟ 6 ಮೀಟರ್ ಆಗಿದ್ದು, ಪ್ರಸ್ತುತ 5 ಮೀಟರ್ ನೀರಿದೆ. ನೀರಿನ ಸಂಗ್ರಹ ಕಾಪಾಡುವ ಉದ್ದೇಶದಿಂದ ಡ್ಯಾಂನ ಎಲ್ಲ ಗೇಟ್‌ಗಳನ್ನು ಮುಚ್ಚಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.

# ...ಮೊದಲನೇ ಪುಟದಿಂದ

## ಕಮಿಟಿಗಳಿಗೆ ಮಾಹಿತಿ ನೀಡಿ ಮುಂಜಾಗ್ರತಾ ಕ್ರಮವಹಿಸಿ-ಡಿಸಿ ಪೂವಿತಾ ಸೂಚನೆ

ಸಹಕರಿಸಬೇಕು ಎಂದು ಮಾಹಿತಿ ನೀಡಲಾಗಿದೆ ಎಂದರು. ಕತಲ್ ರಾತ್ರಿ ಮತ್ತು ದಫನ್ ದಿನದಂದು ರಾತ್ರಿ ಸಮಯದಲ್ಲಿ ವಿದ್ಯುತ್ ಸರಬರಾಜು ಕಡಿತವಾಗದಂತೆ ಕ್ರಮ ವಹಿಸಬೇಕು, ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ, ಮತ್ತು ಜೆಸ್ಕಾಂ ಇಲಾಖೆ ಸಿಬ್ಬಂದಿಗಳು ಸೇರಿದಂತೆ ಶಾಂತಿಯಿಂದ ಆಚರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಜಿಲ್ಲಾ ಪೊಲೀಸ್ ಹೆಚ್ಚುವರಿ ಅಧೀಕ್ಷಕ ಹರೀಶ್ ಮಾತನಾಡಿ, ಜಿಲ್ಲೆಯಲ್ಲಿ ಮೊಹರಂ ಹಬ್ಬ ಆಚರಣೆ ಮಾಡುತ್ತಿದ್ದು ಹಿಂದಿನ ದಿನಗಳಲ್ಲಿ ಅನೇಕ ಅವಘಡಗಳು ಸಂಭವಿಸಿವೆ, ಈ ವರ್ಷ ಯಾವುದೇ ಅವಘಡಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುರಿಸಲು ಎಚ್ಚರ ವಹಿಸಬೇಕು ಎಂದರು.

ಮೊಹರಂ ಹಬ್ಬದ ಅಲಾಯಿ ದೇವರುಗಳು ಪ್ರತಿಷ್ಠಾಪನೆ ಸ್ಥಳದಲ್ಲಿ 15 ಜನರು ಕಮಿಟಿ ರಚಿಸಿಕೊಂಡು ಪೊಲೀಸ್ ಠಾಣೆಯಿಂದ ಪರವಾನಗಿ ಪಡೆಯಬೇಕು, ಹಬ್ಬ ಆಚರಣೆ ದಿನದಿಂದ ಮುಗಿಯುವವರೆಗೆ ಯಾವುದೇ ರೀತಿಯ ಘಟನೆಗಳು ನಡೆಯದಂತೆ ನಿಗಾ ವಹಿಸಿ ಶಾಂತಿ ಪಾಲನೆ ಕಾಪಾಡಬೇಕು, ಆಲಾಯಿ ಕುಣಿಯನ್ನು ಆಳವಾಗಿ ಅಗೆಯಬಾರದು, ಸ್ಥಳದಲ್ಲಿ ಎರಡು ಬ್ಯಾರಲ್ ನೀರು, ಮರಳಿನ ಚೀಲಗಳು ಇಡಲು ವ್ಯವಸ್ಥೆ ಮಾಡಿ ಕೊಳ್ಳಬೇಕು ಎಂದರು. ಮುದ್ಗಲ್ ಪಟ್ಟಣದಲ್ಲಿ ದೊಡ್ಡ ಮಟ್ಟದಲ್ಲಿ ಹಬ್ಬ ಆಚರಣೆ ಮಾಡುತ್ತಿದ್ದು, ಶಾಂತಿ ಸುವ್ಯವಸ್ಥೆ ಕಾಲಾಡಲು ಹೆಚ್ಚಿನ ಭದ್ರತೆ ಒದಗಿಸಲಾಗುತ್ತದೆ, ಶಾಂತಿಯುತವಾಗಿ ಆಚರಣೆ ಮಾಡಲು ಸಹಕಾರ ನೀಡಬೇಕು ಎಂದು ತಿಳಿಸಿದರು.

ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್ ಮಾತನಾಡಿ, ಜಿಲ್ಲೆಯಲ್ಲಿ ಮೊಹರಂ ಹಬ್ಬ ಶಾಂತಿ ಸುವ್ಯವಸ್ಥೆಯಿಂದ ನಡೆಯಲು ಸಾರ್ವಜನಿಕರ ಸಹಕಾರ ಅಗತ್ಯ ಮತ್ತು ಪಂಜಾಗಳ ಮೆರವಣಿಗೆ ವೇಳೆ ಅಗ್ನಿ ಕುಂಡ ಆಯುವ ವೇಳೆ ಎಚ್ಚರಿಕೆ ವಹಿಸಬೇಕು, ಯಾವುದೇ ರೀತಿಯ ಅವಘಡಗಳು ನಡೆಯದಂತೆ ಕ್ರಮ ವಹಿಸಬೇಕು ಎಂದರು.

ಈ ವೇಳೆ ಅಗ್ನಿಶಾಮಕ ದಳ ಅಧಿಕಾರಿ ರವೀಂದ್ರ ವಿವಿಧ ಸಂಘ ಸಂಸ್ಥೆಗಳು ಸಮಾಜದ ಮುಖಂಡ ರುಗಳಾದ ಶ್ರೀನಿವಾಸ ಪತಂಗೆ, ಖಾಜಾ ಅಸ್ಲಂ, ರಸೂಲ್ ಸಾಬ್, ಶಾಂತ ಕುಮಾರ ಹೊನ್ನಟಗಿ ಸೇರಿ ದಂತೆ ಅನೇಕರು ಮಾತನಾಡಿದರು. ಈ ಸಂದರ್ಭದಲ್ಲಿ ಸಿಂಧನೂರು, ಲಿಂಗಸೂಗು ರು, ದೇವದುರ್ಗ, ಮಾನವಿ, ಸಿರವಾರ, ಮಸ್ಕಿ ಸೇರಿದಂತೆ ವಿವಿಧ ಪಟ್ಟಣ ಪಂಚಾಯತಿಗಳ ಸಂಘ ಸಂಸ್ಥೆಗಳು ಮುಖಂಡರು ಇದ್ದರು.

## ಶಾಲೆ ನವೀಕರಣಕ್ಕೆ ಲಂಚ ಡಿಡಿಪಿಐ ಕಚೇರಿ ಎಫ್‌ಡಿಸಿ ಮಹಬಳೇಶ ಲೋಕಾಯುಕ್ತ ಬಲಗೆ

ರೂಪಾಯಿ ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿರುವ ಆರೋಪಿಯಾಗಿದ್ದಾರೆ. ಎಸ್. ವಿದ್ಯಾಜ್ಯೋತಿ ಖಾಸಗಿ ಶಾಲೆಯ ಮಾನ್ಯತೆ ನವೀಕರಣ ಮಾಡಿಕೊಡುವುದಕ್ಕೆ ಮಹಾಬಲೇಶ್ವರ ಒಟ್ಟು ₹40 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಲಾಗಿದೆ. ಈ ಪೈಕಿ ದೂರುದಾರ ಸಿದ್ದಣ್ಣ ರಾಂಪುರ ಈಗಾಗಲೇ ₹25 ಸಾವಿರ ಪಾವತಿಸಿದ್ದರು. ಬಾಕಿ ಉಳಿದ ₹15 ಸಾವಿರವನ್ನು ಇಂದು ಸಿದ್ದಣ್ಣ ಅವರಿಂದ ಸ್ವೀಕರಿಸುತ್ತಿದ್ದ ವೇಳೆ ಮಹಾಬಲೇಶ್ವರ ಲೋಕಾಯುಕ್ತರ ಕೈಗೆ ಸಿಕ್ಕಿಬಿದ್ದಿದ್ದಾರೆ. ಸಿದ್ದಣ್ಣ ಶಾಲೆಯ ನವೀಕರಣ ಪತ್ರ ಪಡೆಯಲು ಸಾಕಷ್ಟು ಬಾರಿ ಕಚೇರಿಗೆ ಅಲೆದಾಡಿದ್ದರು. ಆದ್ರೆ ಲಂಚದ ಬೇಡಿಕೆ ಇಟ್ಟಾಗ ಅವರು ಬೇಸರಗೊಂಡು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಈ ದೂರು ಆಧರಿಸಿ ಇಂದು ಲೋಕಾಯುಕ್ತ ಡಿವೈಎಸ್ಪಿಗಳಾದ ಪಾವಡ ಮತ್ತು ರವಿ ಪುರುಷೋತ್ತಮ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ದಾಳಿ ಕಾರ್ಯಾಚರಣೆ ನಡೆಸಿದೆ. ಘಟನೆಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಗಿಲ್ಲೆಸೂಗೂರಿನಲ್ಲಿಸರ್ಕಾರ ಭೂಮಿಯಲ್ಲಿ ವಾಸ ಮಾಡುವವರಿಗೆ ತೆರವಿಗೆ ಸೂಚನೆ: ಹೈಕೋರ್ಟ ಆದೇಶದ ಉಲ್ಲಂಘನೆ-ಮಹೇಂದ್ರ ಮಿತ್ರ

ಪಶುಸಂಗೋಪನಾ ಕಚೇರಿ,ಡಾ. ಬಿ.ಆರ್.ಅಂಬೇಡ್ಕರ ಭವನ, ರೈತ ಸಂಪರ್ಕಕೇಂದ್ರ, ಸಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಡ ಕಚೇರಿ, ಮಲ್ಲಿಕಾರ್ಜುನ ದೇವಸ್ಥಾನ, ಎರಡು ಸಮೂದಾಯ ಭವನಗಳು ಗ್ರಾಮ ಪಂಚಾಯ್ತಿ ಕಾರ್ಯಲಯ ಸೇರಿದಂತೆ ನಿವಾಸಿಗಳು ವಾಡ ಮಾಡುತ್ತಿದ್ದಾರೆ. ಸರ್ಕಾರವೇ ಭೂಮಿ ಮಂಜೂರಾತಿ ನೀಡಿದೆ.

2014-15 ರಲ್ಲಿ ಸರ್ಕಾರಿ ಭೂಂಮಿಯ ಖಾಲಿ ಜಾಗದಲ್ಲಲಿ ಕೋಣೆ ಮತ್ತು ಬುನಾದಿ ಹಂತದ ಮನೆ ನಿರ್ಮಾಣ ಮಾಡಿದ್ದಾರೆ. 2022 ರಿಂದ ಗ್ರಾಮ ಪಂಚಾಯ್ತಿಗೆ ತೆರಿಗೆ ಪಾವತಿಸಿದ್ದಾರೆ. 2022 ಫಬ್ರುವರಿ 10 ರಂದು 94 ಸಿ ಅರ್ಜಿ ಸಲ್ಲಿಸಿ ಹಕ್ಕುಪತ್ರ ವಿತರಣೆಗೆ ಮನವಿಮಾಡಿದ್ದು ಕಂದಾಯ ಇಲಾಖೆಯಲ್ಲಿ ಬಾಕಿಯಿದೆ. ಆದರೆ ಹೈಕೋರ್ಟ ಆದೇಶದಂತೆ 94 ಸಿ ಅರ್ಜಿ ಸಲ್ಲಿಸಿದವರನ್ನು ತೆರವುಗೊಳಿಸಿದಂತೆ ನಿರ್ಬಂಧಿಸಲಾಗಿದೆ. ಆದರೂ ತಹಸೀಲ್ದಾರರು ಜೂ.6 ರಂದು ಸರ್ಕಾರಿ ಜಾಗದಲ್ಲಿರುವ ತೆರವುಗೊಳಿಸಲು ಸಹಾಯಕ ಆಯುಕ್ತರು ತಹಸೀಲ್ದಾರರಿಗೆ ಆದೇಶ ಮಾಡಿರುವದು ಹೈಕೋರ್ಟ ಆದೇಶದ ಉಲ್ಲಂಘನೆಯಾಗಿದೆ ಎಂದರು. ಮಲ್ಲೇಶ ನಾಯಕ ಸಹ 94 ಸಿ ಅಡಿ ಅರ್ಜಿ ಸಲ್ಲಿಸಿದ್ದು ಬಾಕಿಯಿದೆ. ಸರ್ಕಾರ ಹಕ್ಕುಪತ್ರ ನೀಡಬೇಕಿದ್ದು ತೆರವಿಗೆ ಕಂದಾಯ ಇಲಾಖೆ ನೋಟಿಸ್ ಜಾರಿ ಮಾಡಿದೆ. ಕೂಡಲೇ ಸಹಾಯಕ ಆಯುಕ್ತರು ಆದೇಶವನ್ನು ಹಿಂಪಡೆಯಬೇಕು. ಒತ್ತುವರಿ ಮಾಡಿದವರಿಗೆ ಗ್ರಾಮೀಣ ಶಾಸಕ ದದ್ದಲ ಬಸನಗೌಡ ರಕ್ಷಣೆ ನೀಡುತ್ತಿದ್ದಾರೆ ಎಂದು ಆರೋಪಿಸಿರುವದು ಸುಳ್ಳು ಎಂದರು. ಪರಿಶಿಷ್ಟ ಜಾತಿ ಮತ್ತು ಪಂಗಡದವರು ವಾಸಿಸುತ್ತಿದ್ದು ತೆರವುಗೊಳಿಸಬಾರದು. ಭೂ ಕಂದಾಯ ಕಾಯ್ದೆಯಡಿ 94 ಸಿ ಅರ್ಜಿ ಸಲ್ಲಿಸದರಿಂದ ಸೂಕ್ತ ಕಂದಾಯ ಶುಲ್ಕ ಪಡೆದು ವಸತಿಗಾಗಿ ನಿವೇಶನ ಮಂಜೂರು ಮಾಡಬೇಕು. ಈ ಕರಿತು ಮುಖ್ಯಮಂತ್ರಿಗಳಿಗೆ ದೂರು ನೀಡುವದಾಗಿ ಹೇಳಿದರು.

ಈ ಸಂದರ್ಬದಲ್ಲಿ ಮಲ್ಲೇಶ ನಾಯಕ, ಮಹಾದೇವಿ ನಾಯಕ, ಜಾನರಾಜ ಗಿಲ್ಲೆಸೂಗೂರು, ಸುಧಾಕರ ನೆಲಹಾಳ ಭೀಮಯ್ಯ ಗಿಲ್ಲೆಸೂಗೂರು ಇದ್ದರು.

## ಅಮಾಯಕ ಯುವಕ ಮೇಲೆ ಹಲ್ಲೆ: ತಿಮ್ಮಾರೆಡ್ಡಿ ಗುಡ್ಸಿ ಬೆಂಬಲಿಗರ ಬಂಧನಕ್ಕೆ ಭೀಮಣ್ಣ ಮಂಚಾಲ ಆಗ್ರಹ

ವಿರುದ್ದ ಅನೇಕ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿದ್ದರೂ ಗುಂಡಾಕಾಯ್ದೆಯಡಿ ಬಂದಿಸಿ ರೌಡಿ ಶೀಟರ್ ಪಟ್ಟಿಗೆ ಸೇರಿಸಿಲ್ಲ. ಬಲಗೈ ಸಮೂದಾಯ ಯುವಕರ ಮೇಲೆ ದುರುದ್ದೇಶ ಪೂರಕವಾಗಿ ಅಮಾಯಕರ ಮೇಲೆ ಹಲ್ಲೆ ನಡೆಸಿ ಭಯ ಸೃಷ್ಟಿಸಲಾಗುತ್ತಿದೆ. ಗುಂಡಾ ಪ್ರವೃತ್ತಿಯಿಂದ ಜನರಲ್ಲಿ ಭಯ ಹುಟ್ಟಿಸುವ ಕೆಲಸ ಮಾಡುತ್ತಿದ್ದು ಕೂಡಲೇ ಗುಡ್ಡಿ ತಿಮ್ಮಾರೆಡ್ಡಿ ವಿರುದ್ದ ಕ್ರಮ ಕೈಗೊಳ್ಳಬೇಕೆಂದರು.

ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಇ.ಕುಮಾರ ಮಾತನಾಡಿ ನಗರದಲ್ಲಿ ಕೆಲ ವ್ಯಕ್ತಿಗಳಿಂದ ಅನಗತ್ಯವಾಗಿ ಗುಂಡಾಗಿರಿ ಪ್ರದರ್ಶಿಸಲಾಗುತ್ತಿದೆ ಯುವಕರನ್ನು ಅಮಲಿನಲ್ಲಿ ಕುಡಿತ ಚಟಗಳಿಗೆ ಹಣ ನೀಡಿ ಪ್ರೋತ್ಸಾಹಿಸಿ ಹಲ್ಲೆ, ದೌರ್ಜನ್ಯ ನಡೆಸಲಾಗುತ್ತಿದೆ. ರಾಘವೇಂದ್ರ ಎಂಬ ಯುವಕಮೇಲೆ ಗುಡ್ಡಿ ತಿಮ್ಮಾರೆಡ್ಡಿ ಬೆಂಬಲಿಗರ ಹಲ್ಲೆ ಮಾಡಿ ಗಂಬೀರ ಗಾಯಗೊಳಿಸಿದ್ದಾರೆ. ಜಾತಿ ನಿಂದನೆ ಮಾಡಿ ಅಪಮಾನಿಸಿದ್ದಾರೆ. ರಾಜಕೀಯ ಪ್ರಭಾವ ಬಳಸಿ ಕೇಸ್‌ಗಳನ್ನು ಮುಚ್ಚಿ ಹಾಕಲಾಗುತ್ತಿದೆ. ಕೂಡಲೇಆರೋಪಿಗಳನ್ನು ಬಂಧಿಸಬೇಕು. ಇಲ್ಲದೇ ಹೋದರೆ ನಿರ್ಲಕ್ಷ್ಯವಹಿಸಿಉರವ ಪೊಲೀಸ್ ಅಧಿಕಾರಿಗಳ ವಿರುದ್ದ ಪೊಲೀಸ್ ಪ್ರಾಧಿಕಾರಕ್ಕೆ ದೂರು ನೀಡುವ ಜೊತೆಗೆ ಗೃಹ ಸಚಿವರಿಗೂ ದೂರು ನೀಡುವದಾಗಿ ಹೇಳಿದರು. ಈ ಸಂದರ್ಬದಲ್ಲಿ ಹಲ್ಲೆಗೊಳದ ರಾಘವೇಂದ್ರ, ತಾಯಿ ಲಕ್ಷ್ಮೀ ಭೀಮಣ್ಣ, ಎನ್. ಸತ್ಯನಾರಾಯಣ, ಆರ್.ಬಸವರಾಜ, ಆರ್.ರಾಮಕೃಷ್ಣ, ಆಂಜಿನೇಯ್ಯ ಕೊಂಬಿನ್, ಎಂ.ಮಾರೆಪ್ಪ, ಶಶಿಧರ, ಗಾರ್ಲೆ ವಿಜಯ, ಪ್ರಾಣೇಶ ಮಂಚಾಲ, ಕೆ.ಬಾಬು, ವೆಂಕಟೇಶ ಆರೋಲಿಕರ್, ಶಾಂತಮಲ್ಲೇಶ, ವೆಂಕಟೇಶ ಅಸ್ಕಿಹಾಳ ಆಂಜಿನಯ್ಯ, ಈರಣ್ಣ ಕುರ್ಡಿ, ದೇವೆಂದ್ರಕುಮಾರ, ಮಹೇಶ ಸೇರಿದಂತೆ ಅನೇಕರಿದ್ದರು.

## ಕನ್ನಡ ಸೇನೆಯಿಂದ ಗಡಿನಾಡ ಸಮಸ್ಯೆಗಳ ಜಾಗೃತಿಜಾಥಾ ಕನ್ನಡ ಶಾಲೆ ಉಳಿಸಿ ಭಾಷೆ ಬೆಳೆಸಬೇಕು-ಕೆ.ಎಂ.ಕುಮಾರ

ಸೇರಿ ಎಲ್ಲ ಕಡೆಗೆ ಕನ್ನಡದಲ್ಲಿ ನಾಮಫಲಕ ಅಳವಡಿಸಲು ಕಡ್ಡಾಯಗೊಳಿಸಬೇಕು, ರಾಜ್ಯದಲ್ಲಿ ಮತ್ತು ಗಡಿನಾಡು ಸರ್ಕಾರಿ ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸಬೇಕು ಮತ್ತು ಹೆಚ್ಚಿನ ಅನುದಾನ ನೀಡಬೇಕು, ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದರು. ಜಿಲ್ಲಾಧ್ಯಕ್ಷ ಎಂ ಬಸವರಾಜ ಮಾತನಾಡಿ, ಗಡಿನಾಡು ಕನ್ನಡ ಶಾಲೆಗಳು ಮತ್ತು ಸರ್ಕಾರಿ ಶಾಲೆಗಳ ಉಳಿವುಗಾಗಿ ಹೋರಾಟ ನಡೆಯುತ್ತಿದ್ದು, ಸರ್ಕಾರ ಮುತುವರ್ಜಿ ವಹಿಸಿ ಸರ್ಕಾರಿ ಶಾಲೆಗಳ ಉಳಿವುಗಾಗಿ ಹೆಚ್ಚನ ಅನುದಾನ ನೀಡಿ ಅಭಿವೃದ್ಧಿ ಮಾಡಬೇಕು, ಕನ್ನಡದಲ್ಲಿ ನಾಮಫಲಕ ಅಳವಡಿಕೆ ಕಡ್ಡಾಯಗೊಳಿಸಲು ಆದೇಶ ಮಾಡಿದ್ದು,ಆದರೆ ಶೇ 60 ಹಾಕದೇ ಇರುವವವರ ವಿರುದ್ಧ ಕ್ರಮ ವಹಿಸಲು ಸೂಕ್ತ ಕ್ರಮ ವಹಿಸಬೇಕು ಎಂದರು.ಚಲನಚಿತ್ರ ನಟ ಟಿನ್ನಿಸ್ ಕೃಷ್ಣ ಮಾತನಾಡಿ, ರಾಜ್ಯದ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಲು ಸರ್ಕಾರ ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ರಾಜ್ಯದಾದ್ಯಂತ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು,ಸರ್ಕಾರಿ ಶಾಲೆಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳ ಲಕ್ಷಾಂತರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಪ್ರಮುಖ ಕೇಂದ್ರಗಳಾಗಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕುಸಿತ, ಮೂಲಸೌಕರ್ಯಗಳ ಕೊರತೆ ಹಾಗೂ ಶಿಕ್ಷಕರ ಅಭಾವದಂತಹ ಸಮಸ್ಯೆಗಳು ಹಲವು ಶಾಲೆಗಳಲ್ಲಿ ಕಂಡುಬರುತ್ತಿವೆ. ಈ ಹಿನ್ನೆಲೆಯಲ್ಲಿ ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಮೀಸಲಿಟ್ಟು, ಆಧುನಿಕ ಸೌಲಭ್ಯಗಳನ್ನು ಒದಗಿಸುವ ಮೂಲಕ ಸರ್ಕಾರಿ ಶಾಲೆಗಳ ಮೇಲಿನ ಜನರ ವಿಶ್ವಾಸವನ್ನು ಹೆಚ್ಚಿಸಬೇಕೆಂದರು. ಆರ್‌ಟಿಒ ವೃತ್ತದಿಂದ ಡಿಸಿ ಕಚೇರಿವರೆಗೆ ಬೈಕ್ ರ್ಯಾಲಿ ನಡೆಯಿತು. ಸಂಘಟನೆ ಪದಾಧಿಕಾರಿಗಳು,ಕಾರ್ಯಕರ್ತರು ಭಾಗಿಯಾದರು.

# ಪೂರ್ವ, ಈಶಾನ್ಯ, ಕರ್ನಾಟಕ ಸೇರಿ ದಕ್ಷಿಣ ಭಾರತದಾದ್ಯಂತ ಭಾರಿ ಮಳೆಯಾಗುವ ಸಾಧ್ಯತೆ: ದೆಹಲಿಯಲ್ಲಿ ಅದೇ ಬಿಸಿ ವಾತಾವರಣ

**ಬೆಂಗಳೂರು/ನವದೆಹಲಿ,ಜೂ.18-** ಒಮ್ಮೆ ಸುರಿದು, ತಂಪಾಗಿಸಿದ ವರುಣ ಮತ್ತೆ ಕಾಣಲೇ ಇಲ್ಲ. ದೆಹಲಿಯು ಮತ್ತೊಮ್ಮೆ ಬಿಸಿ ಮತ್ತು ಆರ್ದ್ರ ವಾತಾವರಣವನ್ನು ಅನುಭವಿಸುತ್ತಿದೆ. ಗರಿಷ್ಠ ತಾಪಮಾನ 38ಓಇ, ಕನಿಷ್ಠ ತಾಪಮಾನ 30ಓಇ ಇದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ಮಧ್ಯಾಹ್ನದ ಸಮಯದಲ್ಲಿ ಹಗುರ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿತ್ತು.



ಪರಿಸರವಾದಿ ರಾಜೇಶ್ ಪಾಲ್ ಅವರು, ಮಾನ್ಸೂನ್ ಋತುವಿನ ಆರಂಭದಲ್ಲಿ ತ್ವರಿತಗತಿಯಲ್ಲಿ ಮಳೆಯಾದ ನಂತರ, ಈಗ ಸ್ವಲ್ಪ ಸಮಯದವರೆಗೆ ಅದು ಸ್ಥಗಿತಗೊಂಡಿದೆ ಎಂದು ಹೇಳಿದ್ದಾರೆ. ದೆಹಲಿ-ಎನ್‌ಸಿಆರ್‌ಗೆ ಮಾನ್ಸೂನ್ ಆಗಮನದ ಸಾಮಾನ್ಯ ದಿನಾಂಕ ಜೂನ್ 27 ಆಗಿದ್ದು, ಇದು ಈಗ ಭಾರಿ ಪರಿಣಾಮ ಬೀರುತ್ತಿದೆ. ಆದರೆ ಅದನ್ನು ಗಮನಾರ್ಹವಾಗಿ ವಿಳಂಬ ಎಂದು ಕರೆಯುವುದು ಆಗುವುದಿಲ್ಲ. ಮುಂಬರುವ ವಾರಗಳಲ್ಲಿ ಬಂಗಾಳಕೊಲ್ಲಿಯಲ್ಲಿ ರೂಪುಗೊಳ್ಳುವ ವಾತಾವರಣ ದೆಹಲಿಯಲ್ಲಿ ಮಾನ್ಸೂನ್ ಮಳೆ ಸಮಯಕ್ಕೆ ಸರಿಯಾಗಿ ಬರುತ್ತದೆಯೇ ಅಥವಾ ವಿಳಂಬವಾಗುತ್ತದೆಯೇ ಎಂಬುದನ್ನು ನಿರ್ಧರಿಸುತ್ತದೆ ಎಂದು ಅವರು ಹೇಳಿದ್ದಾರೆ.ಉತ್ತರ ಭಾರತಕ್ಕೆ ಈಗಿರುವ ದೊಡ್ಡ ಸವಾಲು ಮಾನ್ಸೂನ್ ಆಗಮನದ ದಿನಾಂಕವಲ್ಲ, ಆದರೆ ಮಳೆ ಬರುವವರಿಗೆ ಇದೇ ಶಾಖ ಮತ್ತು ತೇವಾಂಶವನ್ನು ಅನುಭವಿಸಬೇಕಾಗುತ್ತದೆ ಎಂದು ಪಾಲ್ ತಿಳಿಸಿದ್ದಾರೆ.

ಕೆಲವು ಪ್ರದೇಶಗಳಲ್ಲಿ ಮಧ್ಯಂತರ ಮಳೆಯ ಹೊರತಾಗಿಯೂ, ಜನರು ಶಾಖದಿಂದ ಪರಿಹಾರ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬಿಹಾರ, ಒಡಿಶಾ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಮುಂದಿನ 3 - 4 ದಿನಗಳವರೆಗೆ ಇದೇ ರೀತಿಯ ಪರಿಸ್ಥಿತಿಗಳು ಮುಂದುವರಿಯುವ ನಿರೀಕ್ಷೆಯಿದೆ. ಇದು ಜನರಿಗೆ ಅನಾನುಕೂಲತೆಯನ್ನುಂಟು ಮಾಡುತ್ತದೆ.

**ದೇಶಾದ್ಯಂತ ಹವಾಮಾನ ಮುನ್ಸೂಚನೆ ಹೀಗಿದೆ:** ವಾಯುವ್ಯ ಭಾರತ: ಜಮ್ಮು ಮತ್ತು ಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಒಂದು ವಾರದವರೆಗೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಮುಂದಿನ ಎರಡು ದಿನಗಳಲ್ಲಿ ಪಶ್ಚಿಮ ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣದ ಹಲವು ಭಾಗಗಳಲ್ಲಿ ಗುಡುಗು ಸಹಿತ ಮಳೆ ಮತ್ತು ಬಲವಾದ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪೂರ್ವ ಭಾರತ: ಐಎಂಡಿ ಪ್ರಕಾರ, ಜೂನ್ 22ರ ನಡುವೆ ಬಿಹಾರ, ಜಾರ್ಖಂಡ್ ಮತ್ತು ಒಡಿಶಾದಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಉಪ - ಹಿಮಾಲಯನ್ ಪಶ್ಚಿಮ ಬಂಗಾಳ, ಬಿಹಾರ ಮತ್ತು ಸಿಕ್ಕಿಂ ದೇಶದಲ್ಲಿ ಅತ್ಯಂತ ತೀವ್ರವಾದ ಹವಾಮಾನವನ್ನು ಅನುಭವಿಸುವ ನಿರೀಕ್ಷೆಯಿದೆ. ಭಾರಿ ಮಳೆ, ಗುಡುಗು ಸಹಿತ ಮತ್ತು ಬಲವಾದ ಗಾಳಿಯಾಗಲಿದೆ. ಜೂನ್ 24ರ ವೇಳೆಗೆ, ಈ ಪ್ರದೇಶಗಳಲ್ಲಿ ಗಾಳಿಯ ವೇಗ ಗಂಟೆಗೆ 40-50 ಕಿ.ಮೀ ತಲುಪಬಹುದು, ಗಾಳಿ ಗಂಟೆಗೆ 60 ಕಿ.ಮೀ ತಲುಪಬಹುದು.

ಈಶಾನ್ಯ ಭಾರತ: ಜೂನ್ 18 ಮತ್ತು ಜೂನ್ 24ರ ನಡುವೆ ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಈ ವಾರ ಈ ಪ್ರದೇಶಗಳಲ್ಲಿ ಗುಡುಗು ಸಹಿತ ಮತ್ತು ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ. ಜೂನ್ 18 ರಿಂದ ಜೂನ್ 24ರವರೆಗೆ ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ವಿದರ್ಭದಲ್ಲಿ ಮಳೆ ಮುಂದುವರಿಯುವ ನಿರೀಕ್ಷೆಯಿದೆ. ಜೂನ್ 18 ಮತ್ತು 21 ರ ನಡುವೆ ಪೂರ್ವ ಮತ್ತು ಪಶ್ಚಿಮ ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ವಿದರ್ಭದಲ್ಲಿ ಚದುರಿದ ಅಥವಾ ಪ್ರತ್ಯೇಕ ಮಳೆ, ಗುಡುಗು, ಮಿಂಚು ಮತ್ತು ಬಲವಾದ ಗಾಳಿಯೊಂದಿಗೆ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಮಧ್ಯ ಭಾರತ: ಜೂನ್ 18 ರಂದು ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ವಿದರ್ಭ(ಮಹಾರಾಷ್ಟ್ರ)ದಲ್ಲಿ ಮಳೆಯ ಚಟುವಟಿಕೆ ಮುಂದುವರಿಯುವ ಸಾಧ್ಯತೆಯಿದೆ ಮತ್ತು ಜೂನ್ 24ರವರೆಗೆ ಮುಂದುವರಿಯುತ್ತದೆ. ಹವಾಮಾನ ಕಚೇರಿಯು ಜೂನ್ 18 ರಿಂದ ಜೂನ್ 21 ರವರೆಗೆ ಪೂರ್ವ ಮತ್ತು ಪಶ್ಚಿಮ ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ವಿದರ್ಭದಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿಯೊಂದಿಗೆ ಚದುರಿದ ಮಳೆಯಾಗುವ ಮುನ್ಸೂಚನೆ ನೀಡಿದೆ.

ಪಶ್ಚಿಮ ಭಾರತ: ಜೂನ್ 18 ರಿಂದ 24 ರವರೆಗೆ ಗುಜರಾತ್, ಕೊಂಕಣ ಮತ್ತು ಗೋವಾ, ಮಧ್ಯ ಮಹಾರಾಷ್ಟ್ರ ಮತ್ತು ಮರಾಠವಾಡದಲ್ಲಿ ವ್ಯಾಪಕ ಮಳೆಯಾಗುವ ಮುನ್ಸೂಚನೆಯನ್ನು ಐಎಂಡಿ ನೀಡಿದೆ. ಜೂನ್ 18 ರಂದು ಕೊಂಕಣ ಮತ್ತು ಗೋವಾ, ಮಧ್ಯ ಮಹಾರಾಷ್ಟ್ರ ಮತ್ತು ಮರಾಠವಾಡದ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಮಿಂಚು ಮತ್ತು ಬಲವಾದ ಗಾಳಿ ಬೀಸುವ ನಿರೀಕ್ಷೆಯಿದೆ. ಈ ಮಧ್ಯೆ, ಅನುಕೂಲಕರವಾದ ದೊಡ್ಡ ಪ್ರಮಾಣದ ಹವಾಮಾನ ಪರಿಸ್ಥಿತಿಗಳ ಅನುಪಸ್ಥಿತಿಯಿಂದಾಗಿ ನೈಋತ್ಯ ಮಾನ್ಸೂನ್ ಮಹಾರಾಷ್ಟ್ರಕ್ಕೆ ಮುನ್ನಡೆಯುವಲ್ಲಿ ವಿಳಂಬದ ಬಗ್ಗೆ ಐಎಂಡಿ ಪತ್ರಿಕಾ ಪ್ರಕಟಣೆ ನೀಡಿದೆ.

ದಕ್ಷಿಣ ಭಾರತ: ದಕ್ಷಿಣ ಭಾರತದಲ್ಲಿ, ತೆಲಂಗಾಣ, ಕರಾವಳಿ ಆಂಧ್ರಪ್ರದೇಶ, ಆಂಧ್ರದ ರಾಯಲಸೀಮಾ, ಕರ್ನಾಟಕ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಲಕ್ಷದ್ವೀಪಗಳಲ್ಲಿ ಜೂನ್ 24 ರವರೆಗೆ ಮಳೆ ಮುಂದುವರಿಯುವ ನಿರೀಕ್ಷೆಯಿದೆ. ಜೂನ್ 18 ರಂದು ತಮಿಳುನಾಡು, ಕೇರಳ ಮತ್ತು ಪುದುಚೇರಿಯಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಐಎಂಡಿ ನೀಡಿದೆ. ಈ ಪ್ರದೇಶಗಳಲ್ಲಿ ಗುಡುಗು ಸಹಿತ ಗುಡುಗು ಸಹಿತ ಗಂಟೆಗೆ 40-50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ.

## ನ್ಯಾಯಯುತ ಪರಿಹಾರಕ್ಕೆ ಆಗ್ರಹಿಸಿ ಬಳ್ಳಾರಿ ಬಂದ್ : ಕೆಐಎಡಿಬಿ ಪ್ರತಿಕೃತಿ ದಹಿಸಿ ರೈತರ ಆಕ್ರೋಶ

**ಬಳ್ಳಾರಿ,ಜೂ.18-**ಸರ್ಕಾರ ವಶಪಡಿಸಿಕೊಂಡ ಭೂಮಿಗೆ ನ್ಯಾಯಯುತ ಪರಿಹಾರ ಮತ್ತು ಭೂಮಿಯ ಮಾರುಕಟ್ಟೆ ಮೌಲ್ಯ ನೀಡುವಂತೆ ಆಗ್ರಹಿಸಿ ಬಳ್ಳಾರಿ ತಾಲೂಕಿನ ಕುಡುತಿನಿ ಭಾಗದ ಭೂ ಸಂತ್ರಸ್ತ ರೈತರು ಗುರುವಾರ ಬಳ್ಳಾರಿ ಬಂದ್‌ಗೆ ಕರೆ ನೀಡಿ ಪ್ರತಿಭಟನೆ ತೀವ್ರಗೊಳಿಸಿದರು.



ನಗರದ ರಾಯಲ್ ವೃತ್ತದಲ್ಲಿ ಸೇರಿದ್ದ ರೈತರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಬಂದ್‌ಗೆ ಸಾರ್ವಜನಿಕರಿಂದ ನಿರೀಕ್ಷಿತ ಮಟ್ಟದ ಬೆಂಬಲ ಸಿಗದೇ ಇದ್ದರೂ, ರೈತರು ತಮ್ಮ ಹೋರಾಟವನ್ನು ಮುಂದುವರಿಸಿದರು.

ಕುಡುತಿನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಸಾವಿರಾರು ಎಕರೆ ಭೂಮಿಯನ್ನು ಬ್ರಹ್ಮಿಣಿ, ಮಿತ್ತಲ್, ಎನ್‌ಎಂಡಿಸಿ ಸೇರಿದಂತೆ ವಿವಿಧ ಕೈಗಾರಿಕೆಗಳ ಸ್ಥಾಪನೆಗಾಗಿ ಸುಮಾರು 15 ವರ್ಷಗಳ ಹಿಂದೆ ವಶಪಡಿಸಿಕೊಳ್ಳಲಾಗಿತ್ತು. ಆದರೆ, ಭೂಮಿ ಕಳೆದುಕೊಂಡ ರೈತರಿಗೆ ಈವರೆಗೆ ನ್ಯಾಯಯುತ ಪರಿಹಾರ ಮತ್ತು ಮಾರುಕಟ್ಟೆ ಮೌಲ್ಯದ ಬೆಲೆ ದೊರೆತಿಲ್ಲ ಎಂದು ಭೂ ಸಂತ್ರಸ್ತರು ಆರೋಪಿಸಿದರು.ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ವಶಪಡಿಸಿಕೊಂಡ ಭೂಮಿಯನ್ನು ಹತ್ತು ವರ್ಷಗಳೊಳಗೆ ಆ ಉದ್ದೇಶಕ್ಕೆ ಬಳಸಬೇಕು. ಇಲ್ಲವಾದಲ್ಲಿ ಭೂಮಿಯನ್ನು ಮೂಲ ಮಾಲೀಕರಿಗೆ ಮರಳಿಸಬೇಕು. ಆದರೆ, ತಮ್ಮ ಭೂಮಿಯನ್ನು ಬಳಸದೆ ಇಟ್ಟಿದ್ದರೂ ಸರ್ಕಾರ ಅದನ್ನು ಹಿಂದಿರುಗಿಸುತ್ತಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದರು. ಭೂ ಸಂತ್ರಸ್ತರ ಹೋರಾಟ ಸಮಿತಿಗೆ ವಿವಿಧ ರೈತ, ಕಾರ್ಮಿಕ, ಮಹಿಳಾ ಹಾಗೂ ಪ್ರಗತಿಪರ ಸಂಘಟನೆಗಳು ಬೆಂಬಲ ಸೂಚಿಸಿವೆ. ನ್ಯಾಯಯುತ ಭೂ ಬೆಲೆ ನೀಡುವಲ್ಲಿ ಸರ್ಕಾರದ ವಿಳಂಬ ಧೋರಣೆ ಮತ್ತು ಕೆಐಎಡಿಬಿಯ ಕಾರ್ಯ ವೈಖರಿಯನ್ನು ಖಂಡಿಸಿ ಬಂದ್ ನಡೆಸಲಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

## ಜೂ. 30ಕ್ಕೆ ಆದೇಶ ಕಾಯ್ದಿರಿಸಿದ ಜಿಲ್ಲಾ ವಿಶೇಷ ಪೋಕ್ಸೋ ಕೋರ್ಟ್

ಮುಂದೂಡಿದ್ದಾರೆ. ಹೈಕೋರ್ಟನಲ್ಲಿ ಜೂನ್ 23ಕ್ಕೆ ವಚನಾನಂದ ಸ್ವಾಮೀಜಿ ಜಾಮೀನು ಅರ್ಜಿ ವಿಚಾರಣೆ ಇದ್ದು, ಹೈಕೋರ್ಟ್ ಆದೇಶದ ನಂತರ ಜಿಲ್ಲಾ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರು ಆದೇಶ ಪ್ರಕಟ ಮಾಡಲಿದ್ದಾರೆ ಎಂದು ವಚನಾನಂದ ಸ್ವಾಮೀಜಿ ಪರ ವಕೀಲ ಎಸ್. ವಿ. ಪಾಟೀಲ್ ತಿಳಿಸಿದರು.

ಮೇ 2ಕ್ಕೆ ಜಾಮೀನು ನೀಡಿದ್ದ ನ್ಯಾಯಾಲಯ: ವಚನಾನಂದ ಸ್ವಾಮೀಜಿ ಅವರಿಗೆ ಮೇ 2ರಂದು ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ಜಾಮೀನು ಅರ್ಜಿಯನ್ನು ರದ್ದುಗೊಳಿಸುವಂತೆ ತನಿಖಾಧಿಕಾರಿ ಹಾಗೂ ಸರ್ಕಾರಿ ಅಭಿಯೋಜಕರು ಅರ್ಜಿ ಸಲ್ಲಿಸಿದ್ದರು. ದೂರುದಾರರು ಹೈಕೋರ್ಟ್‌ಗೆ ಕೂಡ ಅರ್ಜಿ ಸಲ್ಲಿಸಿದ್ದರು. ಜಾಮೀನು ರದ್ದು ಕೋರಿ ದೂರುದಾರರು ಕೂಡ ಅರ್ಜಿ ಸಲ್ಲಿಸಿದ್ದಾರೆ. ಈ ಜಾಮೀನು ರದ್ದು ಮಾಡುವಂತೆ ಪಿರ್ಯದುದಾರರು ಜೂನ್ 6ಕ್ಕೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ವಿಚಾರವನ್ನು ದೂರುದಾರರು ದಾವಣಗೆರೆ ಜಿಲ್ಲಾ ಪೋಕ್ಸೋ ವಿಶೇಷ ನ್ಯಾಯಾಲಯದ ಗಮನಕ್ಕೆ ತಂದಿರಲಿಲ್ಲ. ಈ ಜಾಮೀನು ರದ್ದು ಮಾಡುವ ಕುರಿತ ಅರ್ಜಿ ವಿಚಾರಣೆಯ ತೀರ್ಪು ನೀಡಲು ಇಂದಿನ ದಿನ ನಿಗದಿಯಾಗಿತ್ತು. ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವ ಹಿನ್ನೆಲೆ ವಿಶೇಷ ಪೋಕ್ಸೋ ನ್ಯಾಯಾಲಯದಿಂದ ಯಾವುದೇ ಆದೇಶ ನೀಡುವುದು ಸೂಕ್ತವಲ್ಲ ಎಂದು ಜೂನ್ 30ಕ್ಕೆ ಮುಂದೂಡಲಾಗಿದೆ ಎಂದು ಹೇಳಿದರು.

ಜೂನ್ 23ಕ್ಕೆ ಹೈಕೋರ್ಟ್‌ಗೆ ಸ್ವಾಮೀಜಿ ಹಾಜರು: ಜೂನ್ 23ಕ್ಕೆ ಹೈಕೋರ್ಟ್‌ಗೆ ವಚನಾನಂದ ಸ್ವಾಮೀಜಿ ಹಾಜರಾಗುವಂತೆ ನ್ಯಾಯಾಲಯ ನೋಟಿಸ್ ಕೊಟ್ಟಿದೆ. ಸ್ವಾಮೀಜಿ ವಕೀಲರ ಜೊತೆ ಅಂದು ಹಾಜರಾಗಲಿದ್ದಾರೆ. ಸ್ವಾಮೀಜಿಯನ್ನು ಮಠದಿಂದ ಹೊರಹಾಕಲು ಈ ರೀತಿ ಷಡ್ಯಂತ್ರ ರೂಪಿಸಿದ್ದಾರೆ. ನಾವು ಕೂಡ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ. ಇನ್ನು ಹೈಕೋರ್ಟ್‌ನಲ್ಲಿ ಒಂದೇ ಪ್ರಕರಣ ಇದ್ದಾಗ ಪೋಕ್ಸೊ ವಿಶೇಷ ನ್ಯಾಯಾಲಯ ನೀಡಿದ ತೀರ್ಪಿಗೆ ವ್ಯತಿರಿಕ್ತವಾದ ಆದೇಶ ಹೈಕೋರ್ಟ್‌ನಿಂದ ಬರಬಾರದು ಎಂದು ತೀರ್ಪು ಮುಂದೂಡಿಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಎರಡು ನ್ಯಾಯಾಲಯಗಳಲ್ಲಿ ಒಂದೇ ಪ್ರಕರಣ ಇದ್ದಾಗ ಕೆಳ ನ್ಯಾಯಾಲಯಗಳು ತೀರ್ಪಿನ ಬಗ್ಗೆ ತೀರ್ಮಾನ ಮಾಡಲು ಬರಲ್ಲ. ಹೈಕೋರ್ಟ್‌ನಲ್ಲಿ ಏನು ತೀರ್ಪು ಬರಲಿದೆಯೋ ಅದೇ ಅಂತಿಮ ಆದೇಶ ಆಗಿರುತ್ತದೆ. ಇನ್ನು ಚಾರ್ಜ್ ಶೀಟ್ ಎಂದರೆ ತನಿಖೆ ಅಂತಿಮವಾದ ಬಳಿಕ ಸಲ್ಲಿಸುವ ವರದಿ. ತನಿಖೆ ಪೂರ್ಣವಾಗಿಲ್ಲ ಎಂದಾಗ ಚಾರ್ಜ್‌ಶೀಟ್ ಏಕೆ ಸಲ್ಲಿಕೆ ಮಾಡ್ಬೇಕಿತ್ತು? ತನಿಖೆ ಬಳಿಕವೇ ಮಾಡ್ಬೇಕಾಗಿತ್ತು. ಈ ಪ್ರಕರಣದ ಹಿಂದೆ ಯಾರ ಷಡ್ಯಂತ್ರ ಇದೆ. ಯಾರ ಕೈವಾಡ ಇದೆ ಎಂಬುದು ಎಲ್ಲವೂ ಸದ್ಯದಲ್ಲೇ ಹೊರಬಲಿದೆ ಎಂದು ತಿಳಿಸಿದರು.

## ಗಲಗರಿಂದ ನಕಲಿ ವರ್ಕ ಡನ್ ಸರ್ಟೀಫಿಕೇಟ್: ತನಿಖೆಗೆ ಶಿವುಕುಮಾರ ಜಗ್ಲಿ ಒತ್ತಾಯ

ಲೋಕಾಯುಕ್ತರಿಗೆ ದೂರು ನೀಡಲಾಗಿದೆ. ವಿಚಾರಣೆ ಪ್ರಾರಂಭವಾಗಿದ್ದರೂ ಮತ್ತೆ ಮತ್ತೆ ಅಕ್ರಮಗಳು ನಡೆಸಲಾಗುತ್ತಿದೆ ಎಂದರು. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಮಾಹಿತಿಯಿಲ್ಲದೇ ಕಾಮಗಾರಿ ನಿರ್ವಹಿಸಿರುವದಾಗಿ ಸುಳ್ಳುದಾಖಲೆ ಸೃಷ್ಟಿಸಲಾಗಿದೆ. ಕೂಡಲೇ ತನಿಖಾ ತಂಡ ರಚಿಸಿ ತನಿಖೆ ನಡೆಸಿ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಇಲ್ಲದೇ ಹೋದಲ್ಲಿ ನ್ಯಾಯಾಂಗ ಮೊರೆ ಹೋಗುವದಾಗಿ ಹೇಳಿದರು. ಬಾಬಾ ಮಾತನಾಡಿ ವೆಂಕಟೇಶ ಗಲಗ ಇವರು ಲೋಕೋಪಯೋಗಿ ಸಚಿವರೊಂದಿಗೆ ತೆಗೆಯಿಸಿಕೊಂಡು ಭಾವಚಿತ್ರಗಳನ್ನು ಸಮಾಜಿಕ ಜಾಲತಾಣದಲ್ಲಿ ಹಾಕಿ ಸಂಬಂಧಿಯೆಂದು ಹೇಳಿಕೊಂಡ ಅಕ್ರಮಗಳನ್ನು ನಡೆಸುತ್ತಿದ್ದಾರೆ. ನಕಲಿ ವರ್ಕಡನ್ ನೀಡಿ ಸರ್ಕಾರಕ್ಕೆ ವಂಚಿಸುತ್ತಿರುವ ವೆಂಕಟೇಶ ಗಲಗ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ಸಂದರ್ಬದಲ್ಲಿ ವಿಶಾಲ, ಬಾಬು,ಶ್ರಾವಣ ಇದ್ದರು.

## ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಸಹಕಾರ ನೀಡಲು ನಿರ್ದೇಶನ

ಮಾಡಲಾಗುವುದು ಎಂದು ತಿಳಿಸಿದರು. ಸರ್ಕಾರದ ಯೋಜನೆಗಳಿಗೆ ಸಂಬಂಧಿಸಿದಂತೆ ಸಾಲ ಸೌಲಭ್ಯ, ಸಬ್ಸಿಡಿ, ಸ್ವಸಹಾಯ ಗುಂಪುಗಳಿಗೆ ಖಾತೆ ತೆರೆಯುವುದು ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಜನರಿಗೆ ಸರಿಯಾಗಿ ಒದಗಿಸಬೇಕು. ಶಿಕ್ಷಣ ಸಾಲ, ಮನೆ ಸಾಳಗಳಿಗೆ ಸಂಬಂಧಿಸಿದಂತೆ ಇತರೆ ಸಾಲ ಸೌಳಭ್ಯಗಳಲ್ಲಿ ಬ್ಯಾಂಕ್‌ಗಳ ಶೇಕಡವಾರು ಪ್ರಗತಿ ಕಡಿಮೆಯಿದ್ದು, ಶೇ.100 ರಷ್ಟು ಪ್ರಗತಿ ಸಾಧಿಸುವಂತೆ ತಿಳಿಸಿದರು. ಜಿಲ್ಲೆಯ ರೈತರಿಗೆ ಬೆಳೆ ವಿಮೆ, ಪ್ರಧಾನ ಮಂತ್ರಿ ಜನಧನ ಯೋಜನೆಯ ಕೆವೈಸಿ ಮರುಪರಿಶೀಲನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭಿಮಾ ಯೋಜನೆ, ಅಟಲ್ ಪಿಂಚಣಿ ಯೋಜನೆ, ಡಿಜಿಟಲ್ ವ್ಯವಹಾರ ಮತ್ತು ಸೈಬರ್ ಪ್ರಕರಣಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಶರಣಬಸವ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ, ಆರ್‌ಬಿಐ ಅಧಿಕಾರಿಗಳು, ಲೀಡ್ ಬ್ಯಾಂಕ್ ವಿಭಾಗೀಯ ವ್ಯವಸ್ಥಾಪಕಿ ಸೀತಾಬಾಯಿ, ನಬಾರ್ಡ್ ವಿಭಾಗೀಯ ವ್ಯವಸ್ಥಾಪಕರು, ಜಿಲ್ಲಾ ವ್ಯವಸ್ಥಾಪಕಿ ಕಲಾವತಿ.ಎನ್, ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ಸುಧೀಂದ್ರ ಸೇರಿ ಅನೇಕರಿದ್ದರು.

## ಆರೋಪ ಮಾಡಿದ್ದ ಮಹಿಳೆ ವಿರುದ್ಧ ಸಿಬ್ಬಂದಿಯಿಂದ ದೂರು: ಎನ್‌ಸಿಆರ್ ದಾಖಲು

ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಗಂಭೀರ ಸ್ವರೂಪವಲ್ಲದ ಪ್ರಕರಣ (ಎನ್ ಸಿಆರ್) ದಾಖಲಾಗಿದೆ.

ಜೈಲಿನಲ್ಲಿ ಪವಿತ್ರಾಗೌಡಗೆ ಜೈಲು ಸಿಬ್ಬಂದಿಗಳಿಂದಲೇ ರಾಜಾತಿಥ್ಯ ನೀಡಲಾಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಮಾಧ್ಯಮಗಳ ಮುಂದೆ ಸಂಧ್ಯಾ ಹೇಳಿದ್ದಾರೆ.

ವೈಯಕ್ತಿಕ ಕಾರಣಕ್ಕಾಗಿ ಅಪರಾಧ ಪ್ರಕರಣವೊಂದರಲ್ಲಿ ಮೂರು ತಿಂಗಳ ಹಿಂದೆ ಜೈಲು ಸೇರಿದ್ದೆ. ಮಹಿಳಾ ಬ್ಯಾರಕ್‌ನಲ್ಲಿ ಇರುವಾಗ ಪವಿತ್ರಾಗೌಡಳಿಗೆ ಮನೆಯಿಂದಲೇ ಊಟ ಸಿಗುತಿತ್ತು. ಮಹಿಳಾ ಸಿಬ್ಬಂದಿಯೊಬ್ಬರೇ ಬಾಕ್ಸ್ ತರುತ್ತಿದ್ದರು. ಸಿಬ್ಬಂದಿ ನೆರವಿನಿಂದ ರಾಜಾತಿಥ್ಯ ಸಿಗುತ್ತಿದೆ. ಜೈಲಿನಲ್ಲಿದ್ದಾಗ ಅಕ್ರಮ ಚಿನ್ನ ಸಾಗಾಟ ಪ್ರಕರಣದಲ್ಲಿ ಜೈಲಿನಲ್ಲಿದ್ದ ರನ್ಯಾರಾವ್ ಹಾಗೂ ಪವಿತ್ರಾಗೌಡಗೆ ಜೈಲಿನ ಗ್ರಂಥಾಲಯದಲ್ಲಿ ಜಗಳವಾಗಿತ್ತು. ಈ ವೇಳೆ, ರನ್ಯಾ ಪರವಾಗಿ ಧ್ವನಿ ಎತ್ತಿದ್ದೆ. ಪುರುಷ ವಿಭಾಗದ ಬ್ಯಾರಕ್‌ನಲ್ಲಿರುವ ದರ್ಶನ್ ಬಗ್ಗೆ ತನಗೇನು ಗೊತ್ತಿಲ್ಲ ಎಂದು ಸಂಧ್ಯಾ ನಾಗರಾಜ್ ಹೇಳಿದ್ದಾರೆ.

ಜೈಲಿನ ಸಿಬ್ಬಂದಿ ವಿರುದ್ಧ ಮಾಧ್ಯಮಗಳಲ್ಲಿ ಕಿಡಿಕಾರುತ್ತಿದ್ದಂತೆ ಜೈಲಿನ ಮುಖ್ಯ ವೀಕ್ಷಕಿ ದೇವಮ್ಮ ಅವರು ಸಂಧ್ಯಾ ವಿರುದ್ಧ ದೂರು ನೀಡಿದ್ದಾರೆ. ಅವಮಾನ ಮಾಡುವ ದೃಷ್ಟಿಯಿಂದ ಇಲ್ಲಸಲ್ಲದ ಆರೋಪ ಮಾಡಿ, ತೇಜೋವಧೆ ಮಾಡಿ, ಮಾನಸಿಕವಾಗಿ ಕುಗ್ಗುವಂತೆ ಮಾಡಿದ್ದಾರೆ. ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಲಾಗಿದ್ದು, ಸಂಧ್ಯಾ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ದೂರಿನಲ್ಲಿ ಜೈಲು ಸಿಬ್ಬಂದಿ ತಿಳಿಸಿದ್ದಾರೆ.

## 22ರಂದು ವಿದ್ಯುತ್ ಗುತ್ತಿಗೆದಾರರಿಂದ ಪ್ರತಿಭಟನೆ-ವೆಂಕಟೇಶ ಚಿಲಕದ

ಈಗಾಗಲೇ ಮಹಾರಾಷ್ಟ್ರದಲ್ಲಿ 11.20 ಪೈಸೆಗೆ ಇರಬೇಕಾದ ಯೂನಿಟ್ 11 ರೂವಸೂಲಿ ಮಾಡಲಾಗುತ್ತಿದೆ. ಒಂದು ಕಿಲೋ ವ್ಯಾಟಿಗೆ 150 ರೂ ಇರುವ ದರ 400 ರೂ ವಸೂಲಿ ಮಾಡಲಾಗುತ್ತಿದೆ. ಅದೇ ಸ್ಥಿತಿರಾಜ್ಯದಲ್ಲಿಯೂ ಸೃಷ್ಟಿಯಾಗುತ್ತಿದೆ. ಈ ಕುರಿತು ವಿದ್ಯುಚ್ಛಕ್ತಿ ಆಯೋಗಕ್ಕೆ ದೂರ ನೀಡಲಾಗಿದೆ. ಸಾರ್ವಜನಿಕರು ಆಪ್ ಮೂಲಕ ದೂರುನೀಡಿ ಖಾಸಗೀಕರಣವನ್ನು ತಡೆಯಬೇಕಿದೆ. ಸರ್ಕಾರಗಳ ಖಾಸಗೀಕರಣ ವಿರೋಧಿಸಿ 2 ಲಕ್ಷ ಜನರು ಸೇರಿ ಬೆಂಗಳೂರಿನಲ್ಲಿ ಪ್ರತಿಭಟಿಸಲಾಗುತ್ತದೆ. ಕೈಗಾರಿಕೋಧ್ಯಮಿಗಳು, ಗ್ರಾಹಕರು, ಸಂಘಟನೆಗಳು ಹೋರಾಟಕ್ಕೆ ಬೆಂಬಲಿಸಬೇಕೆಂದರು.

ರಾಜ್ಯ ಸಮಿತಿ ಸದಸ್ಯ ಅನ್ವರ ಮೀಯಾ ಮಾತನಾಡಿ, ಸಾರ್ವಜನಿಕ ಸೇವೆಗಳನ್ನು ಖಾಸಗೀಕರಣಗೊಳಿಸುವ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರನ್ನು ಸಂಕಷ್ಟಕ್ಕೆ ತಂದು ನಿಲ್ಲಿಸುತ್ತಿವೆ. ಆರೋಗ್ಯ,ಶಿಕ್ಷಣ, ಸೌಕರ್ಯಗಳು ಈಗಾಗಲೇ ಖಾಸಗೀಕರಣಗೊಳಿಸಿದಂತೆ ವಿದ್ಯುತ್ ವಿತರಣಾ ಸಂಸ್ಥೆಗಳು ಖಾಸಗಿರುವರಿಗೆ ವಹಿಸಿದರೆ ಹಣ ಇದ್ದವರು ಮಾತ್ರ ವಿದ್ಯುತ್ ಪಡೆಯುವ ದಿನಗಳು ಬರಲಿವೆ. ಕೂಡಲೇ ಖಾಸಗೀಕರಣ ವಿರೋಧಿಸಿ ಸಾರ್ವಜನಿಕರು ಹೋರಾಟ ನಡೆಸಬೇಕೆಂದರು. ಈ ಸಂದರ್ಬದಲ್ಲಿ ಸಂಘದ ಅಧ್ಯಕ್ಷ ಅಲ್ಲಾಭಕ್ಷ, ಶ್ರೀನಿವಾಸ, ಗಂಗಾಧರಪಾಟೀಲ್, ಪ್ರಮೋದ ಸುಲ್ತಾನಪುರು, ನಾಗರಾಜ ಇದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L